MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 257 | ರವಿವಾರ : 27-07-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 257 | SUNDAY : 27-07-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ರಾಜ್ಯದ ಆರ್ಥಿಕ ಪರಿಸ್ಥಿತಿ ದಿವಾಳಿ



**ಬೆಂಗಳೂರು.ಜು.26**–ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ದಿವಾಳಿ ಹಂತ ತಲುಪಿದ್ದು, ಕರ್ನಾಟಕದ ಆಡಳಿತವನ್ನು ದೇವರೇ ಬಂದು ಸರಿದೂಗಿಸಬೇಕಾದ ಸ್ಥಿತಿ ಬಂದೊದಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದ್ದಾರೆ.

ರಾಜ್ಯದ ಆಡಳಿತದಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆ ಕೆಲ ಸಚಿವರು ಅಸಮಾಧಾನ ವ್ಯಕ್ತಪಡಿಸಿರುವ ವರದಿಯ ತುಣುಕನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿರುವ ಅವರು, ಕರ್ನಾಟಕದ ಆಡಳಿತ ನಡೆಯುತ್ತಿರುವ ವಿಧಾನಸೌಧದಿಂದ ಅಲ್ಲ, ದೆಹಲಿಯ ಕಾಂಗ್ರೆಸ್ ಹೈಕಮಾಂಡ್ ನಿವಾಸದಿಂದ ಎಂಬುದು ಸ್ಪಷ್ಟವಾಗಿದೆ ಎಂದಿದ್ದಾರೆ.

ದೆಹಲಿಗೆ ಹೋಗಿ ರಾಹುಲ್‌ಗಾಂಧಿಯವರ ಆದೇಶ ಪಡೆದು ಅಲ್ಲಿಂದಲೇ ನಿರ್ಧಾರಗಳನ್ನು ಪ್ರಕಟಿಸುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕಾಂತರಾಜು ಆಯೋಗದ ವರದಿ ತಿರಸ್ಕಾರ ಮೂಲಕ ಅಂಕುಶ ಹಾಕಿದಂತಿರುವ ಹೈಕಮಾಂಡ್, ಪಕ್ಷದ ಉಸ್ತುವಾರಿ ಸುರ್ಜೇವಾಲಾ ಅವರನ್ನು ಸರ್ಕಾರದ ಆಡಳಿತವನ್ನು ನಿಯಂತ್ರಿಸುವ ರಾಯಭಾರಿಯನ್ನಾಗಿ ನೇಮಿಸುವುದರ ಸಾಕ್ಷಿಯಾಗಿ ಅವರು ಸರ್ಕಾರಿ ಅಧಿಕಾರಿಗಳ**(2ನೇಪುಟಕ್ಕೆ)**

## ಸರ್ವೋದಯ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಗಿಲ್ ವಿಜಯ ದಿವಸ್ ಆಚರಣೆ

ಯುವ ಮಾರ್ಗ ಸುದ್ದಿ



**ಮಾನ್ವಿ,ಜು.26**– ಭಾರತೀಯ ಸೇನೆಯ ಕಾರ್ಗಿಲ್ ವಿಜಯಕ್ಕೆ ಇಪ್ಪತ್ತೈದು ವರ್ಷಗಳು ಸಂದ ಹಿನ್ನೆಲೆಯಲ್ಲಿ, ಯುವಾ ಬ್ರಿಗೇಡ್ ರಾಯಚೂರು ವತಿಯಿಂದ ಪಟ್ಟಣದ ಸರ್ವೋದಯ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಗಿಲ್ ವಿಜಯ ದಿವಸವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂಭ್ರಮದ ಅಂಗವಾಗಿ, ಲಿಂಗಸುಗೂರಿನ ಎಚ್.ವಿ.ಪಾವರ್ ಕಾಲೇಜಿನ ವಿದ್ಯಾರ್ಥಿಗಳಿಗೆ ಕಾರ್ಗಿಲ್ ಯುದ್ಧದಲ್ಲಿ ನಮ್ಮ ಸೈನಿಕರು ಮಾಡಿದ ತ್ಯಾಗ ಬಲಿದಾನಗಳು ಮತ್ತು ಭಾರತದ ವಿಜಯೋತ್ಸವದ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಲಾಯಿತು.ಸೈನಿಕರ ಧೈರ್ಯ, ಶೌರ್ಯ ಮತ್ತು ದೇಶಕ್ಕಾಗಿ ಮಾಡಿದ ಸರ್ವೋಚ್ಚ ತ್ಯಾಗವನ್ನು ಸ್ಮರಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯ ಕಿಚ್ಚು ಹೊತ್ತಿಸಲಾಯಿತು. ಕಾರ್ಗಿಲ್ ಯುದ್ಧದ ವೀರ ಕಥೆಗಳನ್ನು ಸ್ಮರಿಸುವ ಮೂಲಕ, ಯುವ ಪೀಳಿಗೆಗೆ ದೇಶ ಸೇವೆ ಮತ್ತು ದೇಶಪ್ರೇಮದ ಮಹತ್ವವನ್ನು ತಿಳಿಸಿಕೊಡಲಾಯಿತು.

ಇದೆ ವೇಳೆ ಅತಿಥಿಗಳನ್ನು ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.**(2ನೇಪುಟಕ್ಕೆ)**

## ಸರ್ಕಾರ ಮತ್ತು ಅಧಿಕಾರಿಗಳಿಗೆ ಪತ್ರಿಕೆಗಳು ಮಾರ್ಗದರ್ಶಕವಾಗಿವೆ : ಎನ್.ಎಸ್. ಬೋಸರಾಜು

ಯುವ ಮಾರ್ಗ ಸುದ್ದಿ



**ಮಾನ್ವಿ,ಜು.26**– ಪಟ್ಟಣದ ಕಲ್ಮಠ ಗುರು ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೆಂಗಳೂರು ರಾಯಚೂರು ಜಿಲ್ಲಾ ಘಟಕ ಹಾಗೂ ಮಾನ್ವಿ ತಾಲೂಕು ಘಟಕ ಹಾಗೂ ಮಾನ್ವಿ ಮಾಧ್ಯಮ ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ಬಸವ ಬೆಳಗು ಹಾಗೂ ಅಭಿನಂದನಾ ಸಮಾರಂಭ ಕಾರ್ಯಕ್ರಮ ವನ್ನು ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಉದ್ಘಾಟಿಸಿ ಮಾತನಾಡಿ, ಕಲ್ಯಾಣ ಕರ್ನಾಟಕದ ರಾಯಚೂರಿನಲ್ಲಿ ಪತ್ರಿಕೆಗಳನ್ನು ನಡೆಸುವುದು ಅತ್ಯಂತ ಕಷ್ಟಕರವಾಗಿದ್ದರು ಕೂಡ ಈ ಭಾಗದಲ್ಲಿನ ಸಮಾಜದ ಆಗುಹೋಗುಗಳನ್ನು ಜನರಿಗೆ ಮುಟ್ಟಿಸುವ ಪ್ರಮಾಣಿಕ ಪ್ರಯತ್ನವನ್ನು ಪತ್ರಿಕೆಗಳು ಮಾಡುತ್ತಿವೆ. ಮತ್ತು ಸರ್ಕಾರ ಮತ್ತು ಅಧಿಕಾರಿಗಳಿಗೆ ಪತ್ರಿಕೆಗಳು ಮಾರ್ಗದರ್ಶಕವಾಗಿವೆ 38 ವರ್ಷಗಳ ಕೆಳಗೆ ಬಸವರಾಜ ಸ್ವಾಮಿಯವರು ಪತ್ರಿಕೆಯನ್ನು ಪ್ರಾರಂಭಿಸಿ ಜನರ ಸಮಸ್ಯೆಗಳನ್ನು ಸಮಾಜಕ್ಕೆ ಹಾಗೂ ಸರ್ಕಾರಕ್ಕೆ ಮುಟ್ಟಿಸುವ ಪ್ರಾಮಾಣಿಕವಾದ ಕಾರ್ಯವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳ ಕುರಿತು ಅನೇಕ ಮಾರ್ಗದರ್ಶಕ ಕೃತಿಗಳನ್ನು ರಚಿಸಿದ್ದರೆ ಪತ್ರಿಕೆಗಳಿಂದ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಆರ್ಶೀವಚನ ನೀಡಿ ಮಾತನಾಡಿ ಸಮಾಜದಲ್ಲಿ ಅರಿವನ್ನು ಮೂಡಿಸುವಲ್ಲಿ ಪತ್ರಕರ್ತರ ಪಾತ್ರ ಮಹತ್ವದಾಗಿರುತ್ತದೆ. ಸಮಾಜದಲ್ಲಿನ ಅಂಕು ಡೊಂಕುಗಳನ್ನು ತಿದ್ದುವ ಅದ್ಭುತವಾದ ಮಾಧ್ಯಮ ಪತ್ರಿಕೋದ್ಯಮವಾಗಿದೆ. ಇಂದಿನ ದಿನಗಳಲ್ಲಿ ಮಾದ್ಯಮಗಳು ನಿಷ್ಠೆಯನ್ನು ಮರೆತಿವೆ ಮಾಧ್ಯಮಗಳು ಹೇಳುವುದನ್ನು ಜನರು ಕೇಳುತ್ತಾರೆ ಅದ್ದರಿಂದ ಪತ್ರಿಕೆಗಳು ಪ್ರಮಾಣಿಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಜಿಲ್ಲೆಯ ಹಿರಿಯ ಶರಣ ಚಿಂತಕರು ,ಶರಣ ಸಾಹಿತಿ ಹಾಗೂ ಪತ್ರಿಕೋದ್ಯಮಿಗಳಾದ ಸುದ್ದಿಮೂಲ ಪತ್ರಿಕೆ ಸಂಸ್ಥಾಪಕರಾದ ಬಸವರಾಜ ಸ್ವಾಮಿಯವರಿಗೆ ಜೀವಮಾನ ಸಾಧನೆಗಾಗಿ ವಿಶೇಷ ಸನ್ಮಾನ ಹಾಗೂ ತಾಲೂಕಿನ ಹಿರಿಯ ವರದಿಗಾರರಾದ ಕಿಡಿಗಣಯ್ಯಸ್ವಾಮಿ,ಸಿದ್ದಾರಾಮಯ್ಯಸ್ವಾಮಿ,ಪಿ.ಪರಮೇಶ, ಸೇರಿದಂತೆ ವನ್ಯ ಜೀವಿ ಸಂರಕ್ಷಣೆಗಾಗಿ ರಾಯಚೂರು ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ರಾಜೇಶನಾಯಕ ಪಕ್ಷಿ ಪ್ರೇಮಿ ಸಲ್ಲಾವುದ್ದೀನ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪರಮೇಶ ಸಾಲಿಮಠ ವಿಶೇಷ ಉಪನ್ಯಾಸ ನೀಡಿದರು. ಅಮರೇಶ ಸಾಲಿಮಠ ಕರೇಗುಡ್ಡ ರವರಿಂದ ಸಂಗೀತ ಗಾಯನ ನಡೆಯಿತು.

ಕಾರ್ಯಕ್ರಮದಲ್ಲಿ ಮಾಜಿ ಸಂಸದರಾದ ಬಿ.ವಿ. ನಾಯಕ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ರಾಜಾ ವೆಂಕಟಪ್ಪನಾಯಕ,ಶಿವರಾಜ ವಕೀಲರು, ಅ.ಭಾ.ವೀ.ಲಿಂ.ಮಹಾಸಭಾ ದಿವ್ಯಾಂಗ ಚೇತನ ವಿಭಾಗದ ರಾಜ್ಯಾಧ್ಯಕ್ಷರಾದ ದೇವೇಂದ್ರಪ್ಪ, ಅಣ್ಣಪ್ಪ ಮೇಟಿ, ಅ.ಭಾ.ವೀ.ಲಿಂ.ಮಹಾಸಭಾ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ ಮಿರ್ಜಾಪುರ್ ,ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಗೌರವಾಧ್ಯಕ್ಷರಾದ ಚಾಮರಾಸ ಮಾಲಿ ಪಾಟೀಲ್, ಎ.ಬಿ. ಉಪಳಮಠ ಹಿರಿಯ ವಕೀಲರು, ತಿಮ್ಮರೆಡ್ಡಿ ಭೋಗವತಿ, ಭವಾನಿ ಸಿಂಗ್ ತಾ.ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹಾರ ಪಾಟೀಲ್, ಮಹಿಳಾ ಘಟಕದ ಅಧ್ಯಕ್ಷರಾದ ಅನುರಾಧ ಪಾಟೀಲ್ ಯುವ ಘಟಕದ ಅಧ್ಯಕ್ಷರಾದ ಮಂಜುನಾಥ, ಅ.ಭಾ.ವೀ.ಲಿಂ.ಮಹಾಸಭಾ ಮಾನ್ವಿ ತಾ.ಸಮಿತಿಯ ತಾ.ಅಧ್ಯಕ್ಷರಾದ ರಾಜಶೇಖರಯ್ಯಸ್ವಾಮಿ, ಕಾರ್ಯದರ್ಶಿ ಆನಂದ ಸ್ವಾಮಿ,ಸೇರಿದಂತೆ ಸಿರವಾರ,ಕವಿತಾಳ ಸಮಿತಿಗಳ ಪದಾಧಿಕಾರಿಗಳು ಇದ್ದರು.

## ಇಟಗಿ ಗ್ರಾಮದ ಮುಖ್ಯ ರಸ್ತೆಯಲ್ಲಿನ ಕೊಳಚೆ ನೀರಿನಿಂದ ರೋಗಭೀತಿ

ಯುವ ಮಾರ್ಗ ಸುದ್ದಿ

**ದೇವದುರ್ಗ,ಜು.26**–ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಇಟಗಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಚರಂಡಿ ನೀರು ತುಂಬಿ ರಸ್ತೆಯ ಮೇಲೆ ಹರಿಯುತ್ತಿರುವುದರಿಂದ ಗ್ರಾಮಸ್ಥರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಚರಂಡಿಗಳನ್ನು ಸರಿಯಾಗಿ ಸ್ವಚ್ಛಗೊಳಿಸದ ಕಾರಣ ಕೊಳಚೆ ನೀರು ರಸ್ತೆಯಲ್ಲಿ ಸಂಗ್ರಹವಾಗಿ ದುರ್ವಾಸನೆ ಬೀರುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಆವರಿಸಿದೆ.

**ಕಲುಷಿತ ನೀರಿನಿಂದ ಆರೋಗ್ಯಕ್ಕೆ ಕುತ್ತು:**

ಗ್ರಾಮದ ಚರಂಡಿಗಳು ತುಂಬಿ ಹರಿಯುತ್ತಿರುವುದರಿಂದ ಸೊಳ್ಳೆಗಳ ಕಾಟ ವಿಪರೀತವಾಗಿದ್ದು, ಡೆಂಗ್ಯೂ, ಮಲೇರಿಯಾ ಸೇರಿದಂತೆ ಇತರೆ ಸಾಂಕ್ರಾಮಿಕ ರೋಗಗಳು ಹರಡುವ ಆತಂಕ ಗ್ರಾಮಸ್ಥರನ್ನು ಕಾಡುತ್ತಿದೆ. ವಿಶೇಷವಾಗಿ ಬಡಾವಣೆಯ ನಿವಾಸಿಗಳು ತಮ್ಮ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚು ಕಳವಳ ವ್ಯಕ್ತಪಡಿಸುತ್ತಿದ್ದಾರೆ.

**ಸಂಚಾರಕ್ಕೆ ತೀವ್ರ ಅಡ್ಡಿ:**

ಮುಖ್ಯ ರಸ್ತೆಯುದ್ದಕ್ಕೂ ಚರಂಡಿ ನೀರು ನಿಂತಿರುವುದರಿಂದ ಪಾದಚಾರಿಗಳು ಹಾಗೂ ವಾಹನ ಸವಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ರಸ್ತೆ ದಾಟಲು



ಜನ ಪರದಾಡುತ್ತಿದ್ದು, ಶಾಲಾ ಮಕ್ಕಳು ಕೊಳಚೆ ನೀರಿನಲ್ಲೇ ನಡೆದು ಹೋಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಪೋಷಕರು ತಮ್ಮ ಮಕ್ಕಳನ್ನು ಎತ್ತಿಕೊಂಡು ರಸ್ತೆ ದಾಟಿಸುವ ದೃಶ್ಯ ಸಾಮಾನ್ಯವಾಗಿಬಿಟ್ಟಿದೆ. ದ್ವಿಚಕ್ರ ವಾಹನ ಸವಾರರು ಕೊಳಚೆ ನೀರು ತುಂಬಿರುವ ರಸ್ತೆಯಲ್ಲಿ ಚಲಿಸಲು ಸರ್ಕಸ್ ಮಾಡಬೇಕಾದ ಪರಿಸ್ಥಿತಿ ಬಂದಿದೆ. ರಸ್ತೆಯಲ್ಲಿರುವ ಹೊಂಡಗಳಲ್ಲಿ ನೀರು ತುಂಬಿಕೊಂಡು, ವಾಹನಗಳು ಅರ್ಧದಷ್ಟು ಮುಳುಗುವ ಅಪಾಯವೂ ಇದೆ. ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ ಎನ್ನುತ್ತಾರೆ ಸ್ಥಳೀಯರು.

**ನಿರ್ಲಕ್ಷ್ಯದ ಆರೋಪ:**

ಈ ಸಮಸ್ಯೆ ಕುರಿತು ಗ್ರಾಮಸ್ಥರು ಹಲವಾರು ಬಾರಿ ಗ್ರಾಮ ಪಂಚಾಯತಿ ಗಮನಕ್ಕೆ ತಂದಿದ್ದರೂ, ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಗ್ರಾಮ ಪಂಚಾಯತಿ ಅಧ್ಯಕ್ಷರು, ಪಿಡಿಒ ಮತ್ತು ಸದಸ್ಯರು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮ ಪಂಚಾಯತಿ ಅಧ್ಯಕ್ಷರು, ಪಿಡಿಒ ಮತ್ತು ಇಟಗಿ ಗ್ರಾಮ ಪಂಚಾಯತಿ ಸದಸ್ಯರು ತಕ್ಷಣವೇ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮುಖ್ಯ ರಸ್ತೆಯ ಕೊಳಚೆ ನೀರನ್ನು ಸ್ವಚ್ಛಗೊಳಿಸಲು ಮತ್ತು ಚರಂಡಿ ವ್ಯವಸ್ಥೆಯನ್ನು ಸುಧಾರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಇನ್ನು ಮುಂದಾದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಕಾದು ನೋಡಬೇಕು.

## ಗಿಲ್ಲೆಸೂಗೂರಿಗೆ ಪ್ರತ್ಯೇಕ ತಾಲೂಕು: ಎರಡನೇ ಸುತ್ತಿನ ಸಭೆಯಲ್ಲಿ ಹೋರಾಟಕ್ಕೆ ಕರೆ!

ಯುವ ಮಾರ್ಗ ಸುದ್ದಿ



**ಗಿಲ್ಲೆಸೂಗೂರು,ಜು. 26**– ಗಿಲ್ಲೆಸೂಗೂರು ಹೋಬಳಿಯನ್ನು ಪ್ರತ್ಯೇಕ ತಾಲೂಕನ್ನಾಗಿ ಘೋಷಿಸಲು ಒತ್ತಾಯಿಸಿ ರಚಿಸಲಾಗಿರುವ ಗಿಲ್ಲೆಸೂಗೂರು ತಾಲೂಕು ಹೋರಾಟ ಸಮಿತಿಯು ತನ್ನ ಎರಡನೇ ಸಭೆಯನ್ನು ಯಶಸ್ವಿಯಾಗಿ ನಡೆಸಿತು. ಈ ಸಭೆಯಲ್ಲಿ ಹೋಬಳಿಯ ಸುತ್ತಮುತ್ತಲಿನ ವಿವಿಧ ಗ್ರಾಮಗಳ ಹಿರಿಯ ಮುಖಂಡರು, ಯುವ ಮಿತ್ರರು ಹಾಗೂ ರೈತ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಸಮಿತಿಯ ರಚನೆ ಮತ್ತು ಮುಂದಿನ ಹೋರಾಟದ ರೂಪುರೇಷೆಗಳ ಬಗ್ಗೆ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು. ಎಲ್ಲರ ಒಪ್ಪಿಗೆಯೊಂದಿಗೆ ವಿಷಯಗಳನ್ನು ಮಂಡಿಸಲಾಯಿತು. "ನಾವೆಲ್ಲರೂ ಒಗ್ಗಟ್ಟಿನಿಂದ ಹೋರಾಟ ನಡೆಸಿದರೆ, ಗಿಲ್ಲೆಸೂಗೂರು ಹೋಬಳಿಯು ತಾಲೂಕು ಆಗುವುದರಲ್ಲಿ ಯಾವುದೇ ಸಂಶಯವಿಲ್ಲ" ಎಂದು ಸಭೆಯಲ್ಲಿ ಭಾಗವಹಿಸಿದ್ದ ಹಿರಿಯರು ಮತ್ತು ಯುವ ಮಿತ್ರರು ದೃಢ ವಿಶ್ವಾಸ ವ್ಯಕ್ತಪಡಿಸಿದರು.

ಈ ಸಭೆಯಲ್ಲಿ ಜನಾರ್ಧನ್ ರೆಡ್ಡಿ ಗೌಡ ಹಂಚಿನಾಳ, ವೀರೇಶ್ ಬಡಿಗೇರ, ವೆಂಕಟೇಶ್ ಬಂಗಾರ ಅಂಗಡಿ, ನಜೀರ್ ಸಾಬ್, ರಾಜು ತುರುಕನಡೋಡೋಣಿ, ಏ.ನರಸಿಂಹ ನಾಯಕ್, ರಾಜರತ್ನ ಗಟ್ಟುಬಿಚ್ಚಾಲಿ, ಸಾಬಣ್ಣ ಗಟ್ಟುಬಿಚ್ಚಾಲಿ, ಗುರುಸ್ವಾಮಿ ನಾಯಕ, ರಾಮಣ್ಣ ಕೆರಿಬೂದೂರು, ರವಿ ಮೊಶಪ್ಪ, ಮಲ್ಲೇಶ್ ನಾಯಕ್, ನರಸಪ್ಪ ಮಾಸ್ಟರ್, ಲೋಕೇಶ್ ನಾಯಕ್, ಆರ್ ನರಸಿಂಹ ನಾಯಕ್, ಬಿ.ಅಂಜನಯ್ಯ, ಕೆ ನಾಗೇಂದ್ರ, ತಿಮ್ಮಪ್ಪ ನಾಯಕ್, ಕೆ ವಿನೋದ್, ಪ್ರಶಾಂತ್ ಕೆಇಬಿ, ಶಿವರಾಮು, ರಾಜಶೇಖರ್ ಡಾಕ್ಟರ್, ಅಬ್ದುಲ್ ಅಮಿದ್, ಗುರುರಾಜ್ ನಾಯ್ಕ್, ರಾಜು ತುಂಗಭದ್ರ, ಮಂಜುನಾಥ ತುಂಗಭದ್ರಾ, ಆರ್.ಲೋಕೇಶ ನಾಯಕ, ರಾಮಕೃಷ್ಣ ದುಗನೂರು, ಆಜಾದ್, ಮೋದಪ್ಪ ಗಟ್ಟಿ ಬಿಚ್ಚಾಲಿ, ಈ.ಶೇಖರ್, ಯೇಸು ಗಿಲೆಸ್ಗೂರು, ಲಿಂಗಪ್ಪ, ರಾಜಶೇಖರ್, ಜಾಸ್ವ ಸೇರಿದಂತೆ ಹಲವು ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

## ರಾಷ್ಟ್ರ ರಕ್ಷಣೆ ಕೇವಲ ಸೈನಿಕನ ಹೊಣೆಯಲ್ಲ : ಬಸವರಾಜ್ ಮುಸ್ಟೂರ್

ಯುವ ಮಾರ್ಗ ಸುದ್ದಿ



**ಮಾನ್ವಿ,ಜು.26**–ದೇಶದ ರಕ್ಷಣೆಯಲ್ಲಿ ಪ್ರಮುಖ ಪಾತ್ರ ಸೈನಿಕ ಕಾಣಿಸಿಕೊಳ್ಳುತ್ತಾನೆ ಆದರೆ ಕೇವಲ ಅವರಿಗೆ ಮಾತ್ರ ಸಿಮಿತ ಅಲ್ಲ ಪ್ರತಿ ಪ್ರಜೆಯು ದೇಶದ ಕಾಳಜಿ ಮತ್ತು ಅಭಿವೃದ್ಧಿಯ ಚಿಂತನೆ ಮಾಡಬೇಕಾದುದ್ದು ಅವಶ್ಯಕತೆ ಇದೆ ಅಂದು ನಾವು ಕಾರ್ಗಿಲ್ ಕದನದಲ್ಲಿ ಶತ್ರು ಅಂದರೆ ಮೊದಲು ಅಲ್ಲಿನ ವಾತಾವರಣ ನಂತರ ಎದುರಾಳಿಗಳಾಗಿದ್ದರು ಇಂದು ನಮ್ಮ ಸಮಾಜ ಪಿಡುಗು, ಭ್ರಷ್ಟಚಾರ, ಮೂಡನಂಬಿಕೆ ನಮಗೆ ವೈರಿಗಳು ಎಂದು ಮಾಜಿ ಯೊಧ ಬಸವರಾಜ ಮುಸ್ಟೂರ ಹೇಳಿದರು.

ಪಟ್ಟಣದ ವೆಂಕಟೇಶ್ವರ್ ಪದವಿ ಮಹಾವಿದ್ಯಾಲಯ ಮಾನ್ವಿಯಲ್ಲಿ ವಂದೇ ಮಾತರಂ ಯುವ ಸಂಘ (ರಿ ) ಮದ್ಲಾಪುರ ಹಾಗೂ ನವ ಸ್ಫೂರ್ತಿ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊ ಳ್ಳಲಾಯಿತು.

ಅಮರ್ ಜವಾನಗೆ ಖಾದಿ ತ್ರಿವರ್ಣದ ಹಾರ ಹಾಕಿ, ಯುದ್ಧದಲ್ಲಿ ಮಡಿದ ಯೋಧರಿಗೆ ಶ್ರದ್ಧಾಂಜಲಿಯು ಮೇಣದ ಬತ್ತಿ ಹಚ್ಚಿ ಮೌನಾಚರಣೆ ಸಲ್ಲಿಸಿ ಮಾಜಿ ಸೈನಿಕರಿಗೆ ಸನ್ಮಾನಿಸಲಾಯಿತು.

ಪ್ರಸ್ತಾವಿಕ ನುಡಿಯಲ್ಲಿ 1999ರ ಕಾರ್ಗಿಲ್ ಕದನ ಶತ್ರು ದೇಶ ಪಾಕಿಸ್ತಾನದ ಸೈನಿಕರನ್ನು ಹೊಡೆದುರುಳಿಸಿ ಇಂದಿಗೆ 26ಕ್ಕೆ 26 ವರ್ಷಗಳು ಕಳೆದಿವೆ ಪ್ರತಿ ವರ್ಷ ಕಾರ್ಗಿಲ್ ವಿಜಯೋತ್ಸವದಲ್ಲಿ ಹುತಾತ್ಮರಾದ ವೀರಯೋಧರ ಗೌರವಿಸಿ ಮಾಜಿ ಹಾಲಿ ಸೈನಿಕರನ್ನು ಸನ್ಮಾನಿಸುವ ಕಾರ್ಯ ನಮ್ಮ ಸಂಘ ಮಾಡುತ್ತಾ ಬಂದಿದೆ. ಉದ್ದೇಶ ಇದಾಗಿದೆ ನಮ್ಮ ಯುವಕ– ವಿದ್ಯಾರ್ಥಿಗಳು ದೇಶ ಭಕ್ತಿಯನ್ನು ಹೊಂದಬೇಕು ಎಂದು ಸಂಪನ್ಮೂಲ ವ್ಯಕ್ತಿ ಮಹಿಬೂಬ ಮದ್ಲಾಪುರ ಹೇಳಿದರು.**(2ನೇಪುಟಕ್ಕೆ)**

## ಮೊದಲನೇಯ ಪುಟದಿಂದ

# ರಾಜ್ಯದ ಆರ್ಥಿಕ ಪರಿಸ್ಥಿತಿ ದಿವಾಳಿ

ನಿರಂತರ ಸಭೆ ನಡೆಸುತ್ತಿದ್ದಾರೆ ಎಂದು ದೂರಿದ್ದಾರೆ.

ಈ ಸಭೆಯ ಬಗ್ಗೆ ಸಚಿವ ಕೆ.ಎನ್ ರಾಜಣ್ಣ ಸೇರಿದಂತೆ ಹಲವು ಸಚಿವರು ಬಹಿರಂಗವಾಗಿಯೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ದೇಶದಲ್ಲಿ ಬಹುತೇಕ ಅಸ್ಥಿತ್ವ ಕಳೆದುಕೊಂಡಿರುವ ಕಾಂಗ್ರೆಸ್‌ಗೆ ಕರ್ನಾಟಕ ಒಂದೇ ಆಧಾರಸ್ತಂಭವಾಗಿದೆ. ನೆಹರು ಕುಟುಂಬಕ್ಕೆ ಎಟಿಎಂ ಕೇಂದ್ರವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಆರ್ಥಿಕ ನೆರವಿನ ಭರವಸೆ ಪಡೆದುಕೊಂಡ ಸಂಕಷ್ಟಿತ ರೋಗಿಗಳ ಚಿಕಿತ್ಸೆಗೂ ಹಣ ಜಮೆಯಾಘುತ್ತಿಲ್ಲ ಎಂಬ ದೂರುಗಳು ಇದ್ದು, ಇಷ್ಟರಮಟ್ಟಿಗೆ ಆರ್ಥಿಕ ಸ್ಥಿತಿ ದಿವಾಳಿಯ ಹಂತ ತಲುಪಿದೆ. ಆಂತರಿಕ ಅಂತಃಕಲಹದಲ್ಲಿ ರಾಜ್ಯದ ಆಡಳಿತ ಯಂತ್ರ ಈಗಾಗಲೇ ನಿಂತ ನೀರಾಗಿದೆ. ಸುರ್ಜೇವಾಲಾ ಅವರು ತಳ ಕಚ್ಚಿರುವ ಬಾವಿಯಲ್ಲೇ ನೀರು ಸೇದುವ ಕಾರ್ಯದಲ್ಲಿ ನಿರತರಾಗಿದ್ದಾರೆ ಎಂದು ಟೀಕಿಸಿದ್ದಾರೆ.

ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳ ಶೀತಲ ಸಮರ ದೆಹಲಿಯ ಅವರ ಇಬ್ಬರು ಅತ್ಯಾಪ್ತ ಸಿಬ್ಬಂದಿಗಳವರೆಗೂ ವ್ಯಾಪಿಸಿದೆ. ಕರ್ನಾಟಕದ ಆಡಳಿತವನ್ನು ದೇವರೇ ಬಂದು ಸರಿದೂಗಿಸಬೇಕಾದ ಸ್ಥಿತಿ ಬಂದೊದಗಿದೆ ಎಂದು

# ಸರ್ವೋದಯ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಗಿಲ್ ವಿಜಯ ದಿವಸ್ ಆಚರಣೆ

ಕಾರ್ಯಕ್ರಮದಲ್ಲಿ ನಿವೃತ್ತ ಯೋಧರಾದ ಜಲ್ಲಿ ಆಂಜನೇಯ ನಾಯಕ್ ನೀರಮಾನ್ವಿ ಮತ್ತು ತಿಪ್ಪಣ್ಣ ಹರಿವಿ ಅವರು ಭಾಗವಹಿಸಿ, ತಮ್ಮ ಅನುಭವಗಳನ್ನು ಹಂಚಿಕೊಂಡರು. ರಾಷ್ಟ್ರೀಯ ಸೇವಾ ಸಮಿತಿಯ ಅರುಣಾ ಕುಲಕರ್ಣಿ ಹಟ್ಟಿ, ಯುವಾಬ್ರಿಗೇಡ್ ಜಿಲ್ಲಾ ಸಂಚಾಲಕರಾದ ಬಸವರಾಜ್ ಬೊಮ್ಮನಾಳ, ನರಸಪ್ಪ ಮಾನ್ವಿ, ಶ್ಯಾಮ್ ಸುಂದರ್ ಹಾಗೂ ಕಾಲೇಜಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಈ ವಿಜಯ ದಿವಸ ಆಚರಣೆಯಲ್ಲಿ ಪಾಲ್ಗೊಂಡಿದ್ದರು.

# ರಾಷ್ಟ್ರ ರಕ್ಷಣೆ ಕೇವಲ ಸೈನಿಕನ ಹೊಣೆಯಲ್ಲ : ಬಸವರಾಜ್ ಮುಸ್ಟೂರ್

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಯೋಧ ಜೆ. ಆಂಜನೇಯ ನೀರಮಾನ್ವಿ ವಿದ್ಯಾರ್ಥಿಗಳು ಪಠ್ಯ ಭೋದನೆಯ ಜೊತೆಗೆ ದೇಶ ಭಕ್ತಿಯನ್ನು ಮೈಗೂಡಿಸಿಕೊಳ್ಳಬೇಕು, ಯುವಕರು ನಾನ ದುಶ್ಚಟಗಳಿಗೆ

ಬಲಿಯಾಗದೆ ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ನಿಮ್ಮ ಪಾತ್ರ ಇರುವ ಹಾಗೆ ಬದುಕು ಮತ್ತು ಗುರಿ ಇಟ್ಟುಕೊಳ್ಳಬೇಕು ಎಂದರು.

ವೇದಿಕೆಯಲ್ಲಿ ಅಧ್ಯಕ್ಷ ಆಂಜನೇಯ ನಸಲಾಪುರ ಮಾತನಾಡಿದರು ಯೋಧರು ಅನುಭವ ಹಂಚಿಕೊಂಡರು.ಮಾಜಿ ಯೋಧ ಶಿವಯ್ಯ ಸ್ವಾಮಿ, ಓಬಳೇಶ್ ಸುಂಕೇಶ್ವರ್ ತಾಂಡ, ಜೆ. ಹನುಮಂತ ನೀರಮಾನ್ವಿ, ಹನುಮಂತ ನಸಲಾಪುರ, ಪ್ರಾಂಶುಪಾಲ ಶಂಕರಪ್ಪ ಅಂಗಡಿ, ಕಾರ್ಯದರ್ಶಿ ಡಾ. ಹುಲಿಯಪ್ಪ, ಮಹ್ಮದ್ ಬೇಗ್, ಉಪನ್ಯಾಸಕ ಅಂಬಣ್ಣ ಉಮಳಿಹೊಸೂರ್, ರೇಣುಕಾ, ಮತ್ತು ಸಂತೋಷ ಹಾಗೂ ವಿದ್ಯಾರ್ಥಿಗಳಿದ್ದರು.ಪ್ರಾರ್ಥನೆ ಅನಿತಾ, ದುರುಗಮ್ಮ, ಸಂತೋಷ ಸ್ವಾಗತಿಸಿ, ವೀರನಗೌಡ ವಂದಿಸಿದರು.

# ಆ.3 ರಂದು ನಗರದಲ್ಲಿ ಸ್ಟೀಲ್ ಸಿಟಿ ರನ್



**ಬಳ್ಳಾರಿ, ಜು.26–** ಇಲ್ಲಿನ ಬಳ್ಳಾರಿ ಸೈಕ್ಲಿಸ್ಟ್ ಮತ್ತು ರನ್ನರ್ಸ್ ಫೌಂಡೇಷನ್ ಆರೋಗ್ಯ ಮತ್ತು ಕ್ಷೇಮಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು. ಅದರಲ್ಲಿ ಪ್ರತಿವರ್ಷದಂತೆ ಆಗಷ್ಟ 3 ರಂದು ನಗರದಲ್ಲಿ ಸ್ಟೀಲ್ ಸಿಟಿ ರನ್ ಸ್ಪರ್ಧೆ ಹಮ್ಮಿಕೊಂಡಿದ್ದು. ಇದರಲ್ಲಿ ಪಾಲ್ಗೊಳ್ಳುವ ಕ್ರೀಡಾಳುಗಳಿಗೆ ನೀಡುವ ಜರ್ಸಿಯನ್ನು ಶನಿವಾರ ಬಿಡುಗಡೆ ಮಾಡಲಾಯ್ತು.

ಫೌಂಡೇಷನ್‌ನ ಅಧ್ಯಕ್ಷ ಡಾ.ಸೋಮನಾಥ, ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಸರಡಾ, ಮಾಜಿ ಅಧ್ಯಕ್ಷರಾದ ಡಾ.ರವಿಶಂಕರ್, ಡಾ.ಬಿ.ಕೆ.ಸುಂದರ್, ಖಜಾಂಚಿ ವಿನೋದ್ ಜೈನ್ ಮೊದಲಾದವರು ಬಿಡುಗಡೆ ಮಾಡಿ. ಇದು ನಾಲ್ಕನೆಯದಾಗಿದೆ. ವಿಜಡಂ ಲ್ಯಾಂಡ್ ಶಾಲೆಯ ಆವರಣದಿಂದ ಸ್ಪರ್ಧೆಗಳು ಮೋಕಾ ಮಾರ್ಗವಾಗಿ ನಡೆಯಲಿವೆ.

ಮೊದಲಿಗೆ 10, ನಂತರ 5 ಮತ್ತು 3 ಕಿಲೋ ಮೀಟರ್ ರನ್ ಇರಲಿದೆ. 10 ಮತ್ತು 5 ಕಿಲೋ ಮೀಟರ್ ರನ್ ಗೆ ಬಹುಮಾನ ಟ್ರೋಪಿಗಳಿವೆ. 3 ಕಿಲೋ ಮೀಟರ್ ಮಜಾ ರನ್ ಕೇವಲ ಭಾಗವಹಿಸುವಿಕೆಗೆ ಮಾತ್ರ ಇವರಿಗೆ ಮೆಡಲ್ ನೀಡುತ್ತದೆ. 5.25 ಲಕ್ಷ ರೂ ಒಟ್ಟು ಬಹುಮಾನದ ಮೊತ್ತ. ಎಲ್ಲರಿಗೂ ಜರ್ಸಿ ನೀಡಲಿದೆ. ಬಹುಮಾನ ವಯಸ್ಸು ಮತ್ತು ಪುರುಷ ಹಾಗು ಮಹಿಳಾ ವಿಭಾಗದಲ್ಲಿರುತ್ತವೆ. 14 ರಾಜ್ಯಗಳಿಂದ ಕ್ರೀಡಾಳುಗಳು ಬರುತ್ತಿದ್ದಾರೆ. ಅದಕ್ಕಾಗಿ ಖಡ್ಡಾಯವಾಗಿ ಸ್ಥಳೀಯರಿಗೆ 4 ಮತ್ತು 5 ನೇ ಸ್ಥಾನದ ಬಹುಮಾನನ್ನು ಕಾಯ್ದಿರಿಸಿದೆ.

ಒಟ್ಟಾರೆ ನಾಲ್ಕು ಸಾವಿರ ಜನ ಪಾಲ್ಗೊಳ್ಳಲು ನೋಂದಣಿ ಮಾಡಿಕೊಂಡಿದ್ದಾರೆ. ಅದರಲ್ಲಿ ಶೇ 20 ಕ್ಕಿಂತ ಹೆಚ್ಚು ಮಹಿಳೆಯರು ಇದ್ದಾರೆ.

10 ಕಿ.ಮಿ. ಓಟದಲ್ಲಿ 815 ಜನರು, 5 ಕಿ.ಮೀ ಓಟದಲ್ಲಿ 2500 ಜನ ಹಾಗು 3 ಕಿಲೋ ಮೀಟರ್ ಮಜಾ ರನ್ ನಲ್ಲಿ 300 ನೋಂದಣಿ ಮಾಡಿಸಿಕೊಂಡಿದ್ದಾರೆ.

ಅಂತರರಾಷ್ಟ್ರೀಯ ಓಟಗಾರ್ತಿ ಕುಮಾರಿ ಸುದೀಕ್ಷಾ ವಿ. ಅವರನ್ನು ಈ ವೇಳೆ ಗೌರವಿಸುತ್ತಿದೆ.ಇದಕ್ಕೆ ನೋಂದಣಿ ಶುಲ್ಕವಿದೆ. ಓಟದ ದಿನ ಸ್ಥಳದಲ್ಲೇ ನೋಂದಣಿ ಇದೆಯಂತೆ. ವಿವಿಧ ಕಂಪನಿಗಳು ಇದಕ್ಕೆ ಆರ್ಥಿಕ ನೆರವು ನೀಡಿವೆ ಎಂದು ತಿಳಿಸಿದರು.

# ಸಮಾಜದಲ್ಲಿ ಸಂಸ್ಕಾರ ಬಿತ್ತುವಲ್ಲಿ ಪ್ರವಚನ ಪೂರಕ : ಮಿಠಾರೆ

**ಔರಾದ್, ಜು.26–**ಸಮಾಜದಲ್ಲಿ ಸಂಸ್ಕಾರವಿಲ್ಲದವರಿಂದ ಸಂಸಾರಗಳು ದಾರಿತಪ್ಪಿ ಸಂಹಾರವಾಗುತ್ತಿದ್ದು, ಅದನ್ನು ತಡೆಯುವ ನಿಟ್ಟಿನಲ್ಲಿ ಪ್ರವಚನಗಳು ಪೂರಕ ಕೆಲಸ ಮಾಡುತ್ತವೆ ಎಂದು ಬಸವ ಕೇಂದ್ರದ ಜಿಲ್ಲಾಧ್ಯಕ್ಷ ಶರಣಪ್ಪ ಮಿಠಾರೆ ಅಭಿಪ್ರಾಯಪಟ್ಟರು

ಅವರು ತಾಲೂಕಿನ ಎಕಲಾರ ಗ್ರಾಮದಲ್ಲಿ ಗುರುವಾರ ಶ್ರಾವಣ ಮಾಸದ ನಿಮಿತ್ತ ನಡೆಯುವ ಬಸವ ದರ್ಶನ ಪ್ರವಚನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸ್ತುತ ಮಕ್ಕಳು, ಯುವಕರಿಗೆ ಸಂಸ್ಕಾರ ನೀಡಲು ಪಾಲಕರು ವಿಫಲರಾಗುತ್ತಿರುವುದು ವಿಪರ್ಯಾಸ ಎಂದರು.

ಪ್ರವಚನಕಾರ ಪ್ರಕಾಶ ದೇಶಮುಖ ಮಾತನಾಡಿ, ಬಸವಾದಿ ಶರಣರ ಚಿಂತನೆಗಳು ಕೇಳಿ ಫಾರ್ವರ್ಡ್ ಮಾಡದೇ ಫಾಲೋ ಮಾಡುವತ್ತ ನಾವೆಲ್ಲರೂ ಶ್ರಮಿಸಬೇಕಿದೆ ಎಂದರು. ಕಮಲನಗರ ರಾಷ್ಟ್ರೀಯ ಬಸವದಳ ಅಧ್ಯಕ್ಷ ನಾಗಯ್ಯ ಸ್ವಾಮಿ ಮಾತನಾಡಿದರು.

ಈ ಸಂಧರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಸುನೀತಾ ಮಣಿಗೆಂಪೂರೆ, ಬಸವ ಕೇಂದ್ರದ ತಾಲೂಕು ಅಧ್ಯಕ್ಷ ಜಗನ್ನಾಥ ಮೂಲಗೆ,



ಕಸಾಪ ಅಧ್ಯಕ್ಷ ಬಾಲಾಜಿ ಅಮರವಾಡಿ, ಲಿಂಗಾಯತ ಮಹಾಸಭಾ ಅಧ್ಯಕ್ಷ ಕಲ್ಲಪ್ಪ ದೇಶಮುಖ, ಭಾರತೀಯ ಬಸವ ಬಳಗ ಅಧ್ಯಕ್ಷ ಡಾ. ಧನರಾಜ ರಾಗಾ, ಪತ್ರಕರ್ತ ಮಲ್ಲಪ್ಪ ಗೌಡ, ಮಲ್ಲಿಕಾರ್ಜುನ ಹಿಪ್ಪಳಗಾವೆ, ಸತೀಶ ಮಜಗೆ, ಶಿವಾನಂದ ಬಿರಾದಾರ, ಚಂದ್ರಕಾಂತ ಹಿಪ್ಪಳಗಾವೆ, ಗಣಪತಿ ದೇಶಪಾಂಡೆ, ನಾಗೇಶ ಪಾಟೀಲ್ ಸೇರಿದಂತೆ ಇನ್ನಿತರರಿದ್ದರು.

# ಪೌರಕಾರ್ಮಿಕರು ಹಾಗೂ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ

ಯುವ ಮಾರ್ಗ ಸುದ್ದಿ

**ಮಾನ್ವಿ,ಜು.26–**ಪಟ್ಟಣದ ಇಂದ್ರ ನಗರ ಸಮುದಾಯ ಭವನದಲ್ಲಿ ಶನಿವಾರ ಭಾರತೀಯ ಸೇವಾ ಸಮಿತಿ ಮತ್ತು ಸರ್ವಧರ್ಮ ಸೇವಾ ವೆಲ್ಪೇರ್ ಟ್ರಸ್ಟ್ ಆಯೋಗದ ಸಹಯೋಗದೊಂದಿಗೆ ಪೌರಕಾರ್ಮಿಕರು ಹಾಗೂ ಹಿರಿಯ ನಾಗರಿಕರಿಗಾಗಿ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸ ಲಾಗಿತ್ತು.

ಈ ಸಾರ್ಥಕ ಕಾರ್ಯ ಕ್ರಮವನ್ನು ಮಾಜಿ ಪುರಸಭೆ ಅಧ್ಯಕ್ಷರಾದ ಸಬ್ಜಲಿ ಶಾಖ, ಹಿರಿಯ ಹೋರಾಟಗಾರರಾದ ಈರೇಶ್ ಹಲಗುಂಚಿ, ಮತ್ತು ಮಾನ್ವಿ




ಪುರಸಭೆಯ ಕಿರಿಯ ಆರೋಗ್ಯ ನಿರೀಕ್ಷಕರಾದ ಮಹೇಶ ಕು ಮಾರ್ ಅವರು ಉದ್ಘಾಟಿಸಿದರು.

ಕಾರ್ಯಕ್ರಮದ ಯಶಸ್ಸಿಗೆ ರಾಯಚೂರು ಜಿಲ್ಲಾಧ್ಯಕ್ಷರಾದ ಬಿ. ತಿಮ್ಮಪ್ಪ, ವಿಕಲಚೇತನ ಘಟಕದ ಜಿಲ್ಲಾಧ್ಯಕ್ಷರಾದ ಕೃಷ್ಣ , ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಶೇಖರ್, ಜಿಲ್ಲಾ ಉಪಾಧ್ಯಕ್ಷರಾದ ವಿನೋದ್ ಕುಮಾರ್ ಹಾಗೂ ಸರ್ವಧರ್ಮ ಸಮಾಜ ಸೇವಕರಾದ ಹನುಮಂತ ಕೋಟೆ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿ ಸಹಕರಿಸಿದರು.

ಈ ಶಿಬಿರದಲ್ಲಿ ನೂರಾರು ಪೌರಕಾರ್ಮಿಕರು ಮತ್ತು ಹಿರಿಯ ನಾಗರಿಕರು ಕಣ್ಣಿನ ತಪಾಸಣೆ ಮಾಡಿಸಿಕೊಂಡು, ಅಗತ್ಯ ಸಲಹೆ ಮತ್ತು ಚಿಕಿತ್ಸೆ ಪಡೆದರು.

# ನೀರು ಸರಬರಾಜು ಕಾಮಗಾರಿ ವೀಕ್ಷಿಸಿದ ಜಿ.ಪಂ.ಸಿಇಒ

**ಚಿಟಗುಪ್ಪ,ಜು.26–**ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಯೋಜನೆಯಾದ ಜಲ್ ಜೀವನ್ ಮಷೀನ್ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯ ನಿಮಿತ್ತ ದೇಶದ ಪ್ರತಿಯೊಂದು ಗ್ರಾಮಗಳ ಮನೆಗಳಿಗೆ ನೀರು ಸರಬರಾಜು ಮಾಡುವ ನಿಟ್ಟಿನಲ್ಲಿ ತರಲಾಗಿದೆ. ಇದರ ಪ್ರಯುಕ್ತ ಇಂದು ಬೀದರ್ ದಕ್ಷಿಣ ಮತಕ್ಷೇತ್ರದ ಮುತ್ತಂಗಿ ಗ್ರಾಮದಲ್ಲಿ ನೀರು ಸರಬರಾಜು ಕಾಮಗಾರಿಯನ್ನು ಮುಖ್ಯ ಕಾರ್ಯನಿರ್ವಾಧಿಕಾರಿ ಅವರು ವೀಕ್ಷಿಸಿ ಜನರಿಗೆ ಮಳೆಗಾಲದಲ್ಲಿ ಆರೋಗ್ಯದಿಂದಿರಲು ಸ್ವಚ್ಛವಾದ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸ್ಥಳೀಯ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದರು.

ಅದೇ ರೀತಿಯಾಗಿ ಇಟಗಾ, ರಾಂಪುರ್, ಮುದ್ನಾಳ್, ಮುಸ್ತರಿ ಸೇರಿದಂತೆ ವಿವಿಧ ಗ್ರಾಮಗಳ ಗ್ರಾಮಗಳಿಗೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಿರೀಶ ಬದೊಲೆ ಅವರು ಮುತ್ತಂಗಿ ಗ್ರಾಮದಲ್ಲಿ ಜಲ್ ಜೀವನ್ ಮಷೀನ್ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ದೂರು ಬಂದಾಗ ಸ್ವತಃ ತಾವೇ ಬಂದು ಅಧಿಕಾರಿಗಳನ್ನು ಎಚ್ಚರಿಸಿ ಅವರಿಂದ ಮಾಹಿತಿ ಕಲೆ ಹಾಕಿದರು.ಅದೇ ರೀತಿ



ಚಿಟಗುಪ್ಪ ತಾಲೂಕಿನ 5 ಗ್ರಾಮಗಳಿಗೆ ಭೇಟಿ ನೀಡಿ ಜಲಜೀವನ್ ಮಷೀನ್ ಕಾಮಗಾರಿ ಹಾಗೂ ವಿವಿಧ ಕಾಮಗಾರಿಗಳ ಬಗ್ಗೆ ಪರಿಶೀಲಿಸಿದರು.ನಂತರ ಪತ್ರಕರ್ತರೊಂದಿಗೆ ಕೂಡ ಮಾತನಾಡಿದ ಅವರು, ಮುಂದೆ ಯಾವುದೇ ರೀತಿಯ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳುತ್ತೇವೆ ಎಂದು ಸ್ಥಳದಲ್ಲೇ ಅಧಿಕಾರಿಗಳಿಗೆ ಹೇಳಿ ಅವರಿಂದ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ತಾಲೂಕ ಪಂಚಾಯತ್ ಮುಖ್ಯ ಕಾರ್ಯನಿರ್ವಾಧಿಕಾರಿ ಲಕ್ಷ್ಮಿ ಬಿರಾದರ್, ಮುತ್ತಂಗಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸಂಧ್ಯಾ ಧೂಮಳೆ ಹಾಗೂ ಗ್ರಾಮಸ್ಥರು ಹಾಜರಿದ್ದರು.

# ನಗರದ ಗುಗ್ಗರಹಟ್ಟಿಯಲ್ಲಿಶ್ವಾನ ಸಂತಾನ ನಿಯಂತ್ರಣ ಕಲ್ಯಾಣ ಕೇಂದ್ರ ಆರಂಭ

**ಬಳ್ಳಾರಿ, ಜು.26–** ನಗರದ ಗುಗ್ಗರಹಟ್ಟಿಯ ವಾಟರ್ ಟ್ಯಾಂಕ್ ಬಳಿ ಮಹಾನಗರ ಪಾಲಿಕೆಯ ವತಿಯಿಂದ ಆರಂಭಿಸಲಾಗಿರುವ ಶ್ವಾನ ಸಂತಾನ ನಿಯಂತ್ರಣ ಹಾಗೂ ಕಲ್ಯಾಣ ಕೇಂದ್ರ ಉದ್ಘಾಟನೆಗೊಂಡಿದೆ.

ಶಾಸಕಭರತ್ ರೆಡ್ಡಿ ಉದ್ಘಾಟನೆ ಮಾಡಿ, ನಗರದಲ್ಲಿ 25 ಸಾವಿರ ಶ್ವಾನಗಳು ಇವೆ, ಶ್ವಾನಗಳ ದಾಳಿ, ಕಡಿತದಿಂದ ರೇಬಿಸ್ ಖಾಯಿಲೆ ಹರಡಿ ಸಾಕಷ್ಟು ಸಮಸ್ಯೆ ಆಗಿತ್ತು, ಈಗ ಮಹಾನಗರ ಪಾಲಿಕೆ ಈ ಸಮಸ್ಯೆ ನಿವಾರಿಸಲು ದಿಟ್ಟ ಹೆಜ್ಜೆ ಇಟ್ಟಿದೆ ಎಂದರು.

ಎನ್‌ಂಡಿಸಿ ಸಹಯೋಗದಲ್ಲಿ ಈ ಶ್ವಾನ ಸಂತಾನ ನಿಯಂತ್ರಣ ಮತ್ತು ಕಲ್ಯಾಣ ಕೇಂದ್ರ ನಿರ್ಮಿಸಲಾಗಿದೆ, ಅಂದಾಜು 25 ಲಕ್ಷ ರೂ.ಗಳಲ್ಲಿ ಕಟ್ಟಡ ನಿರ್ಮಿಸಲಾಗಿದ್ದು, ಕೇಂದ್ರದ ನಿರ್ವಹಣೆಗೆ 80 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗು




ತ್ತಿದೆ. ಆಸ್ರಾ ಎಂಬ ಸಂಸ್ಥೆಯ ವರಿಗೆ ಈ ಗುತ್ತಿಗೆ ನೀಡಲಾ ಗಿದೆ. ಅಂದಾಜು 7 ಸಾವಿರ ಶ್ವಾನಗಳಿಗೆ ಸಂತಾನ ನಿಯಂತ್ರಣ ಶಸ್ತ ಚಿಕಿತ್ಸೆ ಮಾಡಲಿದ್ದಾರೆ.

ಮೇಯರ್ ಮುಲ್ಲಂಗಿ ನಂದೀಶ್ ಮಾತನಾಡಿ, ಮೂರು ವರ್ಷಗಳಿಂದ ನಗರದಲ್ಲಿ ಶ್ವಾನಗಳ ಹಾವಳಿ ಮಿತಿ ಮೀರಿತ್ತು, ಶ್ವಾನ ನಿಯಂತ್ರಣ ಮಾಡುವ ಪ್ರಯತ್ನ ಇಂದು ಕಾರ್ಯ ರೂಪಕ್ಕೆ ಬಂದಿದೆ, ಈ ಕೇಂದ್ರದಲ್ಲಿ ಶ್ವಾನಗಳ ಸಂತಾನ ನಿಯಂತ್ರಣ ಶಸ್ತ್ರ ಚಿಕಿತ್ಸೆ ಹಾಗೂ ರೇಬಿಸ್ ಸೋಂಕು ನಿರೋಧಕ ಲಸಿಕೆ ನೀಡಲಾಗುವುದು, ಸಾರ್ವಜನಿಕರ ಅನುಕೂಲಕ್ಕಾಗಿ ಟೋಲ್ ಫ್ರೀ ಸಂಖ್ಯೆ ನೀಡಲಾಗುವುದೆಂದರು.

ಈ ಸಂದರ್ಭ ಪಾಲಿಕೆಯ ಸದಸ್ಯರಾದ ಮಿಂಚು ಸೀನಾ, ಕಾಂಗ್ರೆಸ್ ಮುಖಂಡರಾದ ನಾಗಲಕೆರೆ ಗೋವಿಂದ, ಗುಗ್ಗರಹಟ್ಟಿ ಅನ್ವರ್, ಪಾಲಿಕೆಯ ಆರೋಗ್ಯ ವಿಭಾಗದ ಅಧಿಕಾರಿ ಮುನಾಫ್ ಪಟೇಲ್, ಆಸ್ರಾ ಸಂಸ್ಥೆಯ ವಿನಯ್ ಮೊದಲಾದವರು ಇದ್ದರು.

# ಗ್ಯಾರೆಂಟಿ ಯೋಜನೆಗಳಿಂದ ಮಹಿಳೆಯರ ಸಬಲೀಕರಣವಾಗಿದೆ: ಸೌಮ್ಯಾ ರೆಡ್ಡಿ

**ಬಳ್ಳಾರಿ, ಜು.26–** ಗ್ಯಾರೆಂಟಿ ಯೋಜನೆಗಳಿಂದ ಮಹಿಳೆಯರ ಸಬಲೀಕರಣವಾಗಿದೆ. ಕೋಟ್ಯಂತರ ಮಹಿಳೆಯರು ಇದರ ಲಾಭ ಪಡೆದುಕೊಂಡಿದ್ದಾರೆ' ಎಂದು ಮಹಿಳಾ ಕಾಂಗ್ರೆಸ್ ರಾಜ್ಯ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಹೇಳಿದ್ದಾರೆ.

ಅವರು ನಿನ್ನೆ ಸಂಜೆ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, 'ಶಕ್ತಿ ಯೋಜನೆಯ ಅಡಿಯಲ್ಲಿ ಬಸ್ ನಲ್ಲಿ 500 ಕೋಟಿ ಜನ ಸಂಚರಿಸಿದ್ದಾರೆ. ಕೆಲಸ, ತೀರ್ಥ ಕ್ಷೇತ್ರ, ಹುಟ್ಟೂರುಗಳಿಗೆ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಗೃಹ ಲಕ್ಷ್ಮೀ ಹಣವನ್ನು ಕೂಡಿಟ್ಟು ಅಗತ್ಯ ಕೆಲಸ ಕಾರ್ಯಗಳಿಗೆ ಬಳಸುತ್ತಿದ್ದಾರೆ. ಇದರಿಂದ ಮಹಿಳೆಯರ ಸಬಲೀಕರಣ ಸಾಧ್ಯವಾಗಿದೆ ಎಂದರು .



ಗೃಹಲಕ್ಷ್ಮೀ ಹಣ ಬಿಡುಗಡೆ ಕುರಿತು ವಿಳಂಬವಾಗುತ್ತಿರುವ ಬಗ್ಗೆ ಮಾತನಾಡಿದ ಅವರು, ವಿಳಂಬವಾಗುತ್ತಿದೆಯೇ ಹೊರತು ಹಣವೇ ಬರುತ್ತಿಲ್ಲ ಎಂದು ಹೇಳುವುದು ತಪ್ಪಾಗಲಿದೆ ಎಂದರು.

# ಸ್ಟೀವ್ ಜಾಬ್ಸ್ ಅನ್ನೋ ಸ್ಫೂರ್ತಿಯ ಚಿಲುಮೆ..!

**ಅ**ದು 1983ರ ಸಮಯವಾಗಿತ್ತು.ಸ್ಟೀವ ಜಾಬ್ಸ್ ಅತ್ಯಂತ ಗಟ್ಟಿಯಾದ ನಿರ್ಧಾರಕ್ಕೆ ಬಂದಿದ್ದರು. ಟೇಬಲ್ ನ ಮತ್ತೊಂದು ಅಂಚಿಗೆ ಕುಳಿತಿದ್ದ ಪೆಪ್ಸಿ ಕಂಪನಿಯ ಅಧ್ಯಕ್ಷರಾದ ಜಾನ್ ಸ್ಕೂಲಿಯವರನ್ನು ಕುರಿತು ನೀನು ನಿನ್ನ ಬದುಕಿನ ಉಳಿದ ದಿನಗಳನ್ನು ಕೂಡ ಹೀಗೆಯೇ ಸಕ್ಕರೆ ಬೆರೆಸಿದ ನೀರನ್ನು ಮಾರಾಟ ಮಾಡುತ್ತಾ ಬದುಕಬೇಕು ಎಂದುಕೊಳ್ಳುವೆಯಾ? ಅಥವಾ ಜಗತ್ತನ್ನು ಬದಲಾಯಿಸುವ ಇಚ್ಛೆ ಇದ್ದರೆ ನನ್ನೊಂದಿಗೆ ಬಂದು ಸೇರಿಕೊಳ್ಳುವಿರಾ? ಎಂದು ಗಟ್ಟಿಯಾಗಿ ಹೇಳಿದರು.ಎರಡನೇ ಮಾತಿಲ್ಲದೆ ಸ್ಕೂಲಿ ಅವರೊಂದಿಗೆ ಕೈಜೋಡಿಸಿದರು. ಅದೊಂದು ಅತ್ಯಂತ ದೃಢ ಮತ್ತು ಸಾಹಸಮಯವಾದ ನಿರ್ಧಾರವಾಗಿತ್ತು.. ಓರ್ವ ಸಣ್ಣ ವಯಸ್ಸಿನ ಯುವಕ ಪೆಪ್ಸಿ ಕಂಪನಿಯ ಮಾಲೀಕ ಮತ್ತು ಸಿಇಒ ಆದ ವ್ಯಕ್ತಿಯನ್ನು ಒಪ್ಪಿಸಿ ಇಂಥದೊಂದು ನಿರ್ಧಾರಕ್ಕೆ ತರುವುದು ಎಂದರೆ ಅಂತಿಂಥ ಮಾತಲ್ಲ? ಈಗಾಗಲೇ ಯಶಸ್ಸಿನ ಉತ್ತುಂಗದಲ್ಲಿರುವ, ಒಂದು ಕಂಪನಿಯನ್ನು ಬಿಟ್ಟು ಆಗತಾನೆ ಆರಂಭವಾದ ತನ್ನ ಸ್ಟಾರ್ಟ್ ಅಪ್ ಕಂಪನಿಗೆ ಕರೆತರುವುದು. ಕೇವಲ 28 ವರ್ಷದ ಜಾಬ್ಸ್ ತನಗಿಂತ 16 ವರ್ಷ ಹಿರಿಯರಾದ 44ರ ಹರೆಯದ ಸ್ಕೂಲಿ ಅವರೊಂದಿಗೆ ಮಾತನಾಡಿ ಅವರನ್ನು ತಮ್ಮ ಕಂಪನಿಗೆ ಕರೆತಂದದ್ದು ಅದ್ಭುತವೇ ಸರಿ. ಇದು ಏನೇ ಆಗಿರಲಿ...ಮುಂದಿನ ಎರಡು ವರ್ಷಗಳಲ್ಲಿ ಉದ್ದಿಮೆಯ ಇತಿಹಾಸದಲ್ಲಿಯೇ ಅತಿ ದೊಡ್ಡ ಮೋಸ ಸ್ಟೀವ ಜಾಬ್ಸ್ ಗೆ ಆಯ್ತು. ತನ್ನದೇ ಕಂಪನಿಯಿಂದ ಆತ ಹೊರಹಾಕಲ್ಪಟ್ಟ.... ಅದೂ ತಾನೇ ಕರೆ ತಂದು ತನ್ನ ಕಂಪನಿಯಲ್ಲಿ ಅವಕಾಶ ಮಾಡಿಕೊಟ್ಟ ಸ್ಕೂಲಿಯಿಂದ.ಸ್ಟೀವ ಜಾಬ್ಸ್ ನನ್ನು ಆತನದ್ದೆ ಕಂಪನಿಯಿಂದ ಹೊರಹಾಕಲು ಕಾರಣವಾದ ಸ್ಕೂಲಿ ಬೋರ್ಡ್ ರೂಮ್ ನ ಅತಿಹೆಚ್ಚಿನ ಓಟುಗಳನ್ನು ಪಡೆದುಕೊಂಡನು.ಇದನ್ನು ನೀವು ನಂಬಲೇಬೇಕು. ಸ್ಟೀವ್ ಜಾಬ್ ತನ್ನದೇ ಆಪಲ್ ಕಂಪನಿಯಿಂದ ಹೊರ ಬಂದ..


ಆದರೆ ನಿಜವಾದ ಕಥೆ ಏನು? ಇದು ಕೇವಲ ಅಹಂ ಭಾವದ ಪ್ರಶ್ನೆ ಅಲ್ಲ. ಇಲ್ಲಿ ಪ್ರಶ್ನೆ ಇದ್ದದ್ದು ದೂರ ದೃಷ್ಟಿ ಮತ್ತು ಇಬ್ಬರು ನಾಯಕರು ಕಂಡುಕೊಂಡ ಎರಡು ವಿಭಿನ್ನ ಭವಿಷ್ಯಗಳಲ್ಲಿ.

ಮತ್ತೊಮ್ಮೆ ಹಿಂತಿರುಗಿ ನೋಡಿದಾಗ...... ಆಪಲ್ ಕಂಪನಿಯು ಅತ್ಯಂತ ವೇಗವಾಗಿ ಬೆಳೆಯುತ್ತಿತ್ತು. ಕಡು ಮೇಧಾವಿಯಾಗಿದ್ದ ಸ್ಟೀವ್ ಜಾಬ್ಸ್ ಕ್ರಿಯಾಶೀಲತೆಯ ಜೊತೆಗೆ ಅಸ್ತವ್ಯಸ್ತತೆಯನ್ನು ಮೈಗೂಡಿಸಿಕೊಂಡಿದ್ದ.

ಆತ ಜನರನ್ನು ಪ್ರಭಾವಿಸಿದ್ದ... ಜನರು ತನ್ನ ಮೇಲೆ ಮುಗಿ ಬೀಳುವಂತೆ ಮಾಡುತ್ತಿದ್ದ.

ಆಪಲ್ ಕಂಪನಿಗೆ ಆಗ ಬೇಕಾಗಿದ್ದುದು ಒಂದು ರಚನಾತ್ಮಕ ಭವಿಷ್ಯ, ಆದರೆ ಅದನ್ನು ಜಾಬ್ಸ್ ನಿಂದ ಕೊಡಲು ಸಾಧ್ಯವಾಗಲಿಲ್ಲ.. ಕ್ರಿಯಾಶೀಲ ವ್ಯಕ್ತಿಗಳಲ್ಲಿ ಶಿಸ್ತಿನ ಕೊರತೆ ಇರುತ್ತದೆ. ಆಪಲ್ ಕಂಪನಿಯ ಹೂಡಿಕೆದಾರರಿಗೆ ಓರ್ವ ಜವಾಬ್ದಾರಿಯುತ ಹಿರಿಯ ವ್ಯಕ್ತಿಯ ಅವಶ್ಯಕತೆ ಇತ್ತು. ಜಾಬ್ಸ್ ಹಿರಿಯನನ್ನೇನೋ ತಂದಿದ್ದ. ಸ್ಕೂಲಿ ನುರಿತ ಕಾರ್ಯನಿರ್ವಾಹಕ ಮತ್ತು ಅತ್ಯಂತ ಚುರುಕಾದ ವ್ಯವಹಾರ ಪ್ರಜ್ಞೆಯುಳ್ಳ ವ್ಯಕ್ತಿ. ತನ್ನ ಮಾರ್ಕೆಟಿಂಗ್ ತಂತ್ರದಿಂದಲೇ ಪೆಪ್ಸಿ ಕಂಪನಿಯನ್ನು ಅತ್ಯುನ್ನತ ಸ್ಥಿತಿಗೆ ಸ್ಕೂಲಿ ಕೊಂಡೊಯ್ದಿದ್ದ. ತನ್ನ ವ್ಯವಹಾರವನ್ನು ಕೂಡ ಸ್ಕೂಲಿ ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಾನೆ ಎಂಬ ಆಶಯದಿಂದ ಸಂಪೂರ್ಣ ವ್ಯವಹಾರವನ್ನು ಆತನ ಕೈಗಿಟ್ಟು, ಜಾಬ್ಸ್ ತಾನು ಜಗತ್ತನ್ನು ಬದಲಿಸುವೆಡೆ ತನ್ನ ಗಮನವನ್ನು ಹರಿಸಿದ್ದ.

ಮನುಷ್ಯರಂತೆ ವರ್ತಿಸುವ ಮತ್ತು ವ್ಯವಹರಿಸುವ ಮಿಸಿಂತೋಷ್ ಎಂಬ ಕಂಪ್ಯೂಟರ್ ಮಾನವನನ್ನು ತಯಾರಿಸುವ ಕಾರ್ಯದಲ್ಲಿ ಜಾಬ್ಸ್ ನಿರತನಾಗಿದ್ದ. ನಿದ್ದೆ ಇಲ್ಲದ ರಾತ್ರಿಗಳು ಅತಿ ದೊಡ್ಡ ಪ್ರಮಾಣದಲ್ಲಿ ಹಣಕಾಸು ಮತ್ತು ವಿಪರೀತ ಪರಿಪೂರ್ಣತೆಯನ್ನು ಬೇಡುವ ಈ ಕೆಲಸದಲ್ಲಿ ಆತನ ತಂಡದಲ್ಲಿದ್ದ ಎಲ್ಲಾ ಸದಸ್ಯರು ಬಸವಳಿದರು. 1984



ರಲ್ಲಿ ಮಿಸಿಂತೋಷ್‌ಯಂತ್ರ ಮಾನವನನ್ನು ಬಿಡುಗಡೆ ಮಾಡಲಾಯಿತಾದರೂ ಅದು ದೊಡ್ಡ ಮಟ್ಟದಲ್ಲಿ ವಿಫಲವಾಯಿತು. ಅದೊಂದು ಅದ್ಭುತವಾದ ಯಂತ್ರವಾಗಿತ್ತು ಕ್ರಾಂತಿಕಾರಕ ಬದಲಾವಣೆಯನ್ನು ತರಬಲ್ಲ ಈ ಯಂತ್ರವು ಅತ್ಯಂತ ದುಬಾರಿಯಾಗಿದ್ದು ತನ್ನ ಕಾರ್ಯ ನಿರ್ವಹಣೆಯಲ್ಲಿ ನಿಧಾನ ಗತಿಯನ್ನು ತೋರುತ್ತಿತ್ತು.

ಆಪಲ್ ಕಂಪನಿಯಲ್ಲಿದ್ದ ಹಣ ನಿಧಾನವಾಗಿ ಕರಗತೊಡಗಿತು ಮತ್ತು ಸಂಸ್ಥೆಯಲ್ಲಿ ಕಳವಳ ಹೆಚ್ಚಾಗ ತೊಡಗಿತು.ಸ್ಕೂಲಿಯ ಸಾಕಷ್ಟು ಪ್ರಯತ್ನದ ನಂತರವೂ ಜಾಬ್ಸ್ ಯಾವುದೇ ರೀತಿಯ ಹೊಂದಾಣಿಕೆಗೆ ತಯಾರಾಗಲಿಲ್ಲ... ಪಾಲುಗಾರಿಕೆಯಲ್ಲಿ ಆರಂಭವಾದ ವ್ಯವಹಾರ ಇದೀಗ ಅಧಿಕಾರಶಾಹಿಯ ಜಗಳಕ್ಕೆ ನಾಂದಿ ಹಾಡಿತು. ಅಜಾಗರೂಕತೆಯಿಂದ ವರ್ತಿಸುವ ಸ್ಟೀವ್ ಜಾಬ್ಸ್ ಇನ್ನು ಮುಂದೆ ಕಂಪನಿಯನ್ನು ನಡೆಸಲಾರ ಎಂದು ಸ್ಕೂಲಿ ನಿರ್ಣಯ ಮಾಡಿದ.... ಆತ ಬೋರ್ಡ್ ನ ಎಲ್ಲ ಸದಸ್ಯರ ಬಳಿ ತನ್ನ ಈ ಅಹವಾಲನ್ನು ಕೊಂಡೊಯ್ದ..... ಮತ್ತು ಆತನ ಮಾತಿಗೆ ಬೋರ್ಡ್ ನ ಎಲ್ಲ ಸದಸ್ಯರು ಸಮ್ಮತಿಸಿದರು.

ಅಂತಿಮವಾಗಿ 1985ರಲ್ಲಿ ಆತನೇ ಆರಿಸಿದ, ಆತನೇ ನೌಕರಿಗೆ ಇಟ್ಟುಕೊಂಡ ಜನರು ಜಾಬ್ಸ್ ನನ್ನು ಆತನದ್ದೆ ಕಂಪನಿಯಿಂದ ಹೊರ ಹಾಕಿ ಕಂಪನಿಯಲ್ಲಿನ ಆತನ ಎಲ್ಲಾ ವ್ಯವಹಾರಿಕ ಜವಾಬ್ದಾರಿಗಳನ್ನು ಮೊಟಕುಗೊಳಿಸಿದರು. ಆತನ ಎಲ್ಲ ವ್ಯವಹಾರಿಕ ಶಕ್ತಿಯನ್ನು ಆತನಿಂದ ಕಸಿದುಕೊಳ್ಳಲಾಯಿತು. ಪುಟ್ಟ ಗ್ಯಾರೇಜ್ ಒಂದರಲ್ಲಿ ಆರಂಭಿಸಿದ ಕಂಪನಿ ಇಂದು ಆತನ ಕೈ ಬಿಟ್ಟು ಹೋಗಿತ್ತು. ತನ್ನ 30ನೆಯ ವರ್ಷದಲ್ಲಿ ಆತ ಆರಂಭಿಸಿ ತನ್ನದೆಲ್ಲವನ್ನು ಅರ್ಪಿಸಿದ ಸಂಸ್ಥೆಯಿಂದ ಆತ ಇಂದು ತಾನೇ ಹೊರ ಹಾಕಲ್ಪಟ್ಟ.ಅದೊಂದು ವಿಷಯವೇ ಸಾಕಿತ್ತು ಒಬ್ಬ ವ್ಯಕ್ತಿಯ ಆತ್ಮಸ್ಥೈರ್ಯವನ್ನು ಕುಸಿಯುವಂತೆ ಮಾಡಲು, ಆದರೆ ಜಾಬ್ಸ್ ಅಸಾಧ್ಯ ವ್ಯಕ್ತಿ ಹೃದಯ ಛಿದ್ರಗೊಂಡಂತಹ ವೇದನೆಯನ್ನು ಅನುಭವಿಸಿ ಆಪಲ್ ನಿಂದ ಹೊರ ಬಿದ್ದ ಜಾಬ್ಸ್ ನ ಆತ್ಮಸ್ಥೈರ್ಯ ಮಾತ್ರ ಕುಸಿಯಲಿಲ್ಲ.. ಆತ ತನ್ನ ಕ್ರಿಯಾಶೀಲತೆ ಮತ್ತು ಅಪ್ರತಿಮ ಜಾಣ್ಮೆಯನ್ನು ಮತ್ತೊಂದು ಎತ್ತರಕ್ಕೆ ಕೊಂಡೊಯ್ದ.ಆತ ಮತ್ತೆ ಎರಡು ಹೊಸ ಸಂಸ್ಥೆಗಳನ್ನು ಆರಂಭಿಸಿದ....ನೆಕ್ಸ್ಟ್ NeXT — ಎ ಪವರ ಫುಲ್ ಕಂಪ್ಯೂಟರ್ ಪ್ಲಾಟ್ ಫಾರ್ಮ್ ಪಿಕ್ಸರ್....ಟಾಯ ಸ್ಟೋರಿಗಳನ್ನು ತಯಾರಿಸುವ ಅನಿಮೇಷನ್ ಸ್ಟುಡಿಯೋವನ್ನು ಆರಂಭಿಸಿದ ಇವೆರಡು ಅತಿ ಹೆಚ್ಚಿನ ಯಶಸ್ಸನ್ನು ಗಳಿಸಿದವು. 1997ರಲ್ಲಿ ಆಪಲ್ ಕಂಪನಿಯು ಮುಗ್ಗಟ್ಟಿಗೆ ಸಿಲುಕಿತು ಮತ್ತು ಇನ್ನೇನು ಮುಚ್ಚಿ ಹೋಗುವ ಹಂತದಲ್ಲಿತ್ತು... ಆಗ ಮತ್ತೆ ಅದನ್ನು ಕೈಹಿಡಿದು ಮೇಲೆತ್ತಿದಾತ ಸ್ಟೀವ ಜಾಬ್ಸ್... ಯಾವುದೇ ರೀತಿಯ ಕಿರಿಕಿರಿ ಮತ್ತು ಮುಜುಗರಗಳಿಗೆ ಅವಕಾಶವಿಲ್ಲದಂತೆ ಆತ ಮತ್ತೆ ಹಿಂತಿರುಗಿದ. ಮುಂದಿನ 10 ವರ್ಷಗಳಲ್ಲಿ ಆತ ಆಪಲ್ ಸಂಸ್ಥೆಯ ಐ ಫೋನ್, ಐ ಪ್ಯಾಡ್ ಮತ್ತು ಐ ಪಾಡ್ ಗಳನ್ನು ಮಾರುಕಟ್ಟೆಗೆ ಬಿಟ್ಟ.ತಾನು ನಡೆಸಿದ ಸಂಸ್ಥೆಯಲ್ಲಿ ತನ್ನನ್ನೇ ಹೊರಹಾಕಲ್ಪಟ್ಟರೂ ಮತ್ತೆ ಅದೇ ಸಂಸ್ಥೆಯಲ್ಲಿ ಸೇರಿಕೊಂಡು ಅತ್ಯದ್ಭುತವಾಗಿ ಕಾರ್ಯನಿರ್ವಹಿಸಿ ಔದ್ಯಮಿಕ ಇತಿಹಾಸದ ಪುಟಗಳಲ್ಲಿ ಸೇರಿದ.ನೋಡಿದಿರಾ ಸ್ನೇಹಿತರೆ.... ನಮ್ಮ ಶಕ್ತಿ ಮತ್ತು ಸಾಮರ್ಥ್ಯಗಳು ನಮ್ಮ ಬದುಕಿನ ಅತಿ ದೊಡ್ಡ ಆಸ್ತಿಗಳು. ಭೌತಿಕವಾಗಿ ನಾವು ಬಹಳಷ್ಟು ವಸ್ತುಗಳನ್ನು ಕಳೆದುಕೊಳ್ಳುತ್ತೇವೆ ಆದರೆ ನಮ್ಮಲ್ಲಿರುವ ಮಾನಸಿಕ ಶಕ್ತಿಯನ್ನು, ದೈಹಿಕ ಸಾಮರ್ಥ್ಯವನ್ನು ನಮ್ಮಿಂದ ಯಾರೂ ಕಸಿಯಲಾರರು. ಸ್ನೇಹಿತರೆ ಸ್ಟೀವ್ ಜಾಬ್ ನಂತಹ ಮೇಧಾವಿಗಳಿಂದ ನಾವು ಕಲಿಯಬಹುದಾದ ಪಾಠವೆಂದರೆ ದೂರದರ್ಶಿತ್ವ ವನ್ನು ಹೊಂದಿರುವ ವ್ಯಕ್ತಿಗಳನ್ನು ನಿರ್ವಹಿಸುವುದು ಕಷ್ಟವಾಗಬಹುದು ಆದರೆ 'ರವಿ ಕಾಣದ್ದನ್ನು ಕವಿ ಕಾಣುವ' ಎಂಬಂತೆ ಸಾಮಾನ್ಯ ಜನರಿಗೆ ಕಾಣದೆ ಹೋಗುವ ವಿಷಯಗಳನ್ನು ಇಂತಹ ಅಸಾಮಾನ್ಯರು ಕಂಡುಕೊಂಡಿರುತ್ತಾರೆ. ವ್ಯವಸ್ಥೆಗೆ ಅವರು ಹೊಂದಿಕೊಳ್ಳುವುದಿಲ್ಲ ಎಂಬುದಕ್ಕಾಗಿ ಅವರನ್ನು ದೂರವಿಡುವವರು ಅವರೇ ಒಂದು ವ್ಯವಸ್ಥೆಯನ್ನು ಸೃಷ್ಟಿಸುತ್ತಾರೆ ಎಂಬುದನ್ನು ಅರಿತುಕೊಳ್ಳಬೇಕು.

ನಾಯಕತ್ವ ಎಂಬುದು ಕೇವಲ ಇತರರನ್ನು ಹಿಡಿತದಲ್ಲಿ ಇಡುವುದು ಖಂಡಿತವಾಗಿಯೂ ಅಲ್ಲ.... ಇದೊಂದು ನಿರ್ದೇಶಕನ ಕೆಲಸ. ಆಪಲ್ ಕಂಪನಿಯು ನಿಯತವಾಗಿ ನಡೆಯಲು ಸ್ಕೂಲಿ ಸಹಾಯ ಮಾಡಿದರೆಆಪಲ್ ಕಂಪನಿಗೆ ಆತ್ಮವನ್ನು ನೀಡಿದವನು ಸ್ಟೀವ ಜಾಬ್ಸ್. ಸೋಲು ಬದುಕಿನ ಮುಕ್ತಾಯವಲ್ಲ... ಸೋಲೆಂಬುದು ಅಂತ್ಯವಲ್ಲ... ಅದು ಹೊಸ ಬದುಕಿಗೆ ಆರಂಭ. ಕನಸುಗಳು ಎಂದೂ ಸಾಯುವುದಿಲ್ಲ... ಅವು ನಮ್ಮನ್ನು ಬದುಕಲು ಪ್ರೇರೇಪಿಸುತ್ತವೆ. ನಿಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಡಿ.... ಇಡೀ ಜಗತ್ತು ನಿಮ್ಮನ್ನು ವಿರೋಧಿಸಿದರೂ ನೀವು ಕೈಗೊಂಡಿರುವ ಕೆಲಸವನ್ನು ಕೈ ಬಿಡಬೇಡಿ ಆರಾಮದಾಯಕ ಜೀವನ ಶೈಲಿಯಲ್ಲಿ ದಂತ ಕಥೆಗಳು ಹುಟ್ಟುವುದಿಲ್ಲ... ದಂತ ಕಥೆಗಳು ಹುಟ್ಟುವುದು ತಿರಸ್ಕಾರ, ಅಪಾಯ ಮತ್ತು ತೀವ್ರ ಸಂಶೋಧನೆಗಳ ಮೂಲಕ ಹುಟ್ಟುತ್ತವೆ. ಜಾಬ್ಸ್ ಕೇವಲ ಆಪಲ್ ಕಂಪನಿಯನ್ನು ನಿರ್ಮಿಸಲಿಲ್ಲ.. ಆತ ಒಂದು ಹೊಸ ಸಂಸ್ಕೃತಿಗೆ ನಾಂದಿ ಹಾಡಿದ. ತಂತ್ರಜ್ಞಾನಕ್ಕೆ ಮಾನವತೆಯ ಸ್ಪರ್ಶ ನೀಡಿದ. ತನ್ನನ್ನು ಸಂಸ್ಥೆಯಿಂದ ಹೊರ ಹಾಕಿದರೂ ಕೂಡ ಅದೇ ಸಂಸ್ಥೆಯನ್ನು ಮತ್ತೆ ಸೇರಿ ಜಾಗತಿಕ ಪರಿವರ್ತನೆಗೆ ಒಳ್ಳೆಯ ಹಾದಿಯನ್ನು ತೋರಿದ. ನೋಡಿದಿರಾ ಸ್ನೇಹಿತರೆ.... ಪ್ರತಿ ಯಶಸ್ಸು ಕೂಡ ತನ್ನ ಹಿಂದೆ ನೂರಾರು ಅಪಮಾನಗಳು, ತಿರಸ್ಕಾರಗಳು ಮತ್ತು ನಿದ್ರೆ ಇಲ್ಲದ ರಾತ್ರಿಗಳನ್ನು ಕಂಡಿರುತ್ತದೆ. ಹಸಿವು, ಬಡತನಗಳ ಜೊತೆ ಜೊತೆಗೆ ಅವಹೇಳನ ಮತ್ತು ಕೀಳರಿಮೆಗಳು ಕೂಡ ಕಾಡಿರುತ್ತದೆ. ಆದರೆ ನೆನಪಿಡಬೇಕಾದ ಒಂದು ಸತ್ಯ ಹೇಗಿದೆ , ಯಾವ ಕ್ಷಣದಲ್ಲಿ ನಾವು ಸೋತು ಇನ್ನೇನು ನಮ್ಮ ಬದುಕಿನಲ್ಲಿ ಏನು ಸಾಧಿಸಲು ಸಾಧ್ಯವಿಲ್ಲ ಎಂದು ನಾವು ಸೋತು ಶರಣಾಗುತ್ತೇವೆಯೋ ಅಲ್ಲಿಂದಲೇ ನಮ್ಮ ಸಾಧನೆಯ ಹಾದಿ ಆರಂಭವಾಗುತ್ತದೆ. ಅವಡುಗಚ್ಚಿ, ಬೆವರಿಗಿಂತ ಹೆಚ್ಚು ರಕ್ತ ಸುರಿಸಿ, ತಹತಹಿಸುತ್ತ ಸಾಧನೆಯ ಒಂದೊಂದೇ ಮೆಟ್ಟಿಲನ್ನು ಏರಲು ಮುನ್ನುಡಿಯಾಗುತ್ತದೆ. ಅಂತಹವರು ಕೇವಲ ಇತಿಹಾಸವನ್ನು ನಿರ್ಮಿಸುವುದಿಲ್ಲ ಬದಲಾಗಿ ತಾವೇ ಇತಿಹಾಸವಾಗುತ್ತಾರೆ. ಏನಂತೀರಾ?

**– ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ ಗದಗ್**

# ಧರ್ಮಸ್ಥಳದ ಸುತ್ತ ಹೂತಿಟ್ಟ ಶವಗಳ ರಹಸ್ಯ ಬೇಧಿಸಲು ಎಸ್‌ಐಟಿ ತನಿಖೆ ಆರಂಭ

**ಬೆಂಗಳೂರು,ಜು.26–** ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶವಗಳನ್ನು ಹೂತಿರುವ ಪ್ರಕರಣದ ತನಿಖೆ ಆರಂಭಿಸಿರುವ ವಿಶೇಷ ತನಿಖಾ ದಳ (ಎಸ್‌ಐಟಿ) ದೂರು ನೀಡಿರುವ ಅನಾಮಧೇಯ ವ್ಯಕ್ತಿಯನ್ನು ವಿಚಾರಣೆ ಗೊಳಪಡಿಸಿದ್ದು, ಸ್ಥಳ ಮಹಜರಿಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಧರ್ಮಸ್ಥಳದಲ್ಲಿ ಕೆಲಸ ನಿರ್ವಹಿಸುತ್ತಿದ್ದುದಾಗಿ ಹೇಳಿಕೊಂಡಿರುವ ವ್ಯಕ್ತಿಯೊಬ್ಬ ತಾವು ನೂರಾರು ಶವಗಳನ್ನು ಹೂತಿಟ್ಟಿರುವುದಾಗಿ ಪತ್ರ ಬರೆದಿದ್ದರು ಮತ್ತು ನ್ಯಾಯಾಧೀಶರ ಮುಂದೆ ಹೇಳಿಕೆಯನ್ನೂ ದಾಖಲಿಸಿದ್ದರು.

ಇದರ ಆಧಾರದ ಮೇಲೆ ರಾಜ್ಯಸರ್ಕಾರ ಹೆಚ್ಚಿನ ವಿಚಾರಣೆಗಾಗಿ ಡಿಜಿಪಿ ಪ್ರಣವ್ ಮೊಹಂತಿ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ರಚನೆ ಮಾಡಿದೆ. ಡಿಐಜಿ ಎಂ.ಎನ್ ಅನುಚೇತ್ ಮತ್ತು ಎಸ್‌ಪಿ ಜಿತೇಂದ್ರಕುಮಾರ್ ದಯಾಮ ಅವರುಗಳು ಬೆಳ್ತಂಗಡಿಗೆ ತೆರಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕಿದ್ದಾರೆ.

ಕದ್ರಿಯಲ್ಲಿರುವ ಐಜಿ ಕಚೇರಿಯಲ್ಲಿ ವಿಚಾರಣೆ ನಡೆಸಲಾಗಿದ್ದು, ಪ್ರಾಥಮಿಕ ಮಾಹಿತಿಗಳ ಜೊತೆಗೆ ಎಷ್ಟು ಶವಗಳನ್ನು ಹೂತಿಡಲಾಗಿದೆ, ಸಾವಿನ ಸ್ವರೂಪ ಗಳೇನು, ಕೊಲೆಯಾಗಿತ್ತೆ?, ಅಸಹಜ ಸಾವುಗಳೇ, ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿತ್ತೆ?, ಕೊಲೆ ಅಥವಾ ಅಸಹಜ ಸಾವಿನ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿತ್ತೆ?, ಮಾಹಿತಿ ನೀಡಿದ್ದರೂ ಏಕೆ ಕ್ರಮ ಕೈಗೊಂಡಿರಲಿಲ್ಲ ಎಂಬೆಲ್ಲಾ ಪ್ರಶ್ನೆಗಳನ್ನು ಮುಂದಿಡಲಾಗಿದೆ.

ಶವಗಳನ್ನು ಹೂಳಲು ಹೇಳಿದ್ದು ಯಾರು?, ಕೊಲೆಗಳಾಗಿರುವ ಬಗ್ಗೆ ಯಾವ ರೀತಿಯ ಮಾಹಿತಿ ದೊರೆಯುತ್ತಿತ್ತು?, ಇದಕ್ಕೆ ಮೂಲ ಕಾರಣ ಯಾರು?, ಶವಗಳನ್ನು ಹೂತಿಡಲು ಅಥವಾ ಸಂಸ್ಕಾರ ಮಾಡಲು ಯಾವ ರೀತಿಯ ಪ್ರತಿಫಲ ಸಿಗುತ್ತಿತ್ತು? ಎಂಬೆಲ್ಲಾ ಪ್ರಶ್ನೆಗಳನ್ನು ಕೇಳಿ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ.

ನೀವು ಇಷ್ಟು ದಿನ ಮರೆಯಾಗಿದ್ದು ಈಗ ಮುನ್ನೆಲೆಗೆ ಬರಲು ಕಾರಣವೇನು?, ಈಗ



ಯಾರಾದರೂ ಕುಮಕ್ಕು ನೀಡಿದ್ದಾರೆಯೇ?, ಶವಗಳನ್ನು ಹೂತಿಟ್ಟಿರುವ ಜಾಗ ತೋರಿಸಲು ಸಾಧ್ಯವೇ?, ಅಲ್ಲಿ ಯಾರ್ಯಾರ ಶವವನ್ನು ಸಂಸ್ಕಾರ ಮಾಡಲಾಗಿದೆ, ಅವರು ಸಾವನ್ನಪ್ಪಿದ ರೀತಿ ಹೇಗಿತ್ತು? ಎಂಬ ಪ್ರಾಥಮಿಕ ಮಾಹಿತಿಗಳನ್ನು ಕಲೆ ಹಾಕಲಾಗಿದ್ದು, ಯಾವುದೇ ಕ್ಷಣವಾದರೂ ಸ್ಥಳಕ್ಕೆ ತೆರಳಿ ಮಹಜರು ನಡೆಸುವ ಸಾಧ್ಯತೆಗಳಿವೆ. ಎಸ್‌ಐಟಿಯ ಮತ್ತೊಂದು ಅಧಿಕಾರಿಗಳ ತಂಡ ಶವಗಳನ್ನು ಹೂತಿಟ್ಟಿದ್ದ ಜಾಗವನ್ನು ಉತ್ಖನನ ಮಾಡಲು ಅಗತ್ಯವಾಗಿರುವ ಆಡಳಿತಾತಕ ಅನುಮೋದನೆ ಪಡೆದುಕೊಳ್ಳಲು ಮುಂದಾಗಿದೆ.

ಗುಂಡಿಗಳನ್ನು ಅಗೆದಾಗ ಒಂದು ವೇಳೆ ದೊರೆಯಬಹುದಾದ ಕಳೇಬರಗಳ ಪತ್ತೆಗೆ ಅಗತ್ಯವಾಗಿರುವ ಫೊರೆನ್ಸಿಕ್ ಸೇರಿದಂತೆ ಇತರ ಪ್ರಕ್ರಿಯೆಗಳನ್ನು ಸಜ್ಜುಗೊಳಿಸಿಕೊಳ್ಳಲಾಗುತ್ತಿದೆ. ತಂಡ ರಚನೆಯಾದ ಆರು ದಿನಗಳ ಬಳಿಕ ಸ್ಥಳಕ್ಕೆ ಭೇಟಿ ನೀಡಿರುವ ಎಸ್‌ಐಟಿ ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ. ದೂರುದಾರರನ್ನು ತಮ ವಶಕ್ಕೆ ತೆಗೆದುಕೊಂಡಿದ್ದು, ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ಅಸಹಜ ಸಾವು, ಅತ್ಯಾಚಾರ ಪ್ರಕರಣಗಳ ಸತ್ಯಾಸತ್ಯತೆಯನ್ನು ಭೇದಿಸಲು ಎಸ್‌ಐಟಿ ತಂಡ ಮುಂದಾಗಿದೆ.

ಧರ್ಮಸ್ಥಳ ಪೊಲೀಸ್ ಠಾಣೆಗೆ ಜು.3 ರಂದು ದೂರುದಾರನ ಪರವಾಗಿ ವಕೀಲರು ಹಸ್ತಾಕ್ಷರದ ಪ್ರತಿಯನ್ನು ಸಲ್ಲಿಸಿದ್ದರು. ಇದಾದ ಕೆಲವೇ ಗಂಟೆಗಳಲ್ಲಿ ಎಫ್‌ಐಆರ್ ದಾಖಲಾಗಿದೆ.

ಈ ನಡುವೆ ಸರ್ಕಾರ ಪ್ರಕರಣದ ತನಿಖೆ ನಡೆಸಲು ಹಿರಿಯ ಐಪಿಎಸ್ ಅಧಿಕಾರಿ ಪ್ರಣವ್ ಮೊಹಂತಿ ಅವರ ನೇತೃತ್ವದ ಮೂವರು ಐಪಿಎಸ್ ಅಧಿಕಾರಿಗಳ ಸಹಿತ ಒಟ್ಟು 20 ಮಂದಿಯ ತಂಡವನ್ನು ರಚಿಸಿದೆ.

ತಂಡದ ಅಧಿಕಾರಿಗಳು ರಾತ್ರಿಯೇ ಮಂಗಳೂರಿಗೆ ತೆರಳಿ ವಾಸ್ತವ್ಯ ಹೂಡಿದರು. ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಎಸ್‌ಐಟಿ ಡಿಐಜಿ ಅನುಚೇತ್ ಹಾಗೂ ಪಶ್ಚಿಮ ವಲಯದ ಐಜಿಪಿ ಅಮಿತ್‌ಸಿಂಗ್ ಅವರು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.ಧರ್ಮಸ್ಥಳ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅವರು ಪ್ರಕರಣದ ಈವರೆಗಿನ ತನಿಖೆಯನ್ನು ಎಸ್‌ಐಟಿ ಅಧಿಕಾರಿಗಳಿಗೆ ವಿವರಿಸಿದರು.

ಒಟ್ಟಾರೆ ಈ ಪ್ರಕರಣದ ತನಿಖೆಯನ್ನು ಎಸ್‌ಐಟಿ ಇಂದಿನಿಂದ ಆರಂಭಿಸಿದ್ದು, ಅಗತ್ಯ ತಯಾರಿಗಳನ್ನು ಮಾಡಿಕೊಂಡಿದೆ. ತನಿಖೆ ಒಂದು ಹಂತಕ್ಕೆ ಬಂದ ಬಳಿಕ ನ್ಯಾಯಾಲಯದ ಅನುಮತಿ ಪಡೆದು ದೂರುದಾರನನ್ನು ಶವ ಹೂತಿಟ್ಟ ಸ್ಥಳಗಳಿಗೆ ಕರೆದೊಯ್ದು ಶವಗಳನ್ನು ಹೊರ ತೆಗೆಯುವ ಪ್ರಕ್ರಿಯೆ ನಡೆಯಲಿದೆ.ಒಂದು ವೇಳೆ 20 ವರ್ಷಗಳ ಹಿಂದಿನ ಅಸ್ತಿಪಂಜರಗಳು ದೊರೆತರೆ ಆ ಆಧಾರದಲ್ಲಿ ಮುಂದಿನ ತನಿಖೆಗೆ ಮತ್ತಷ್ಟು ಪುಷ್ಟಿಸಿಕ್ಕಂತಾಗುತ್ತದೆ.

# ಮತಗಳ್ಳತನ ವಿರುದ್ಧ ಕೈ ಅಭಿಯಾನ



**ಬೆಂಗಳೂರು, ಜು.26–**ಭಾರತದ ಚುನಾವಣಾ ಆಯೋಗವನ್ನು ದುರುಪಯೋಗಪಡಿಸಿಕೊಂಡು ಚುನಾವಣೆಗಳಲ್ಲಿ ಮತಗಳ್ಳತನ ನಡೆಸಿರುವ ಕೇಂದ್ರದ ನರೇಂದ್ರಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷ ದೇಶಾದ್ಯಂತ ಅಭಿಯಾನವನ್ನು ನಡೆಸಲಿದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಘೋಷಿಸಿದ್ದಾರೆ.

ಚುನಾವಣೆಗಳಲ್ಲಿ ಮತಗಳ್ಳತನ ಮಾಡಿ ಮತದಾರರ ಪಟ್ಟಿಯನ್ನೇ ತಿರುಚಿ ಅಧಿಕಾರ ಹಿಡಿದಿರುವ ಬಿಜೆಪಿ, ಬರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಅದನ್ನೇ ಮಾಡಲು ಯೋಜನೆ ರೂಪಿಸಿದೆ ಎಂದು ಆರೋಪಿಸಿರುವ ಅವರು, ಚುನಾವಣಾ ಆಯೋಗದ ದುರ್ಬಳಕೆ ವಿರುದ್ಧ ಕಾಂಗ್ರೆಸ್ ಹೋರಾಟ ನಡೆಸಲಿದೆ ಎಂದು ಖಾಸಗಿ ಸುದ್ದಿ ಸಂಸ್ಥೆಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಹೇಳಿದ್ದಾರೆ.

ಬಿಜೆಪಿ ಚುನಾವಣೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಅಕ್ರಮ ಎಸಗಿದೆ. ಈ ಅಕ್ರಮಗಳಿಗೆ ತಮ್ಮ ಬಳಿ ಸಾಕ್ಷಿ ಇದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಅವರು ಮಾಡಿರುವ ಆರೋಪಗಳಿಗೆ ಬೆಂಬಲಿಸಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು, ಕೇಂದ್ರ ಸರ್ಕಾರ ಮತದಾರರ ಪಟ್ಟಿಯನ್ನು ತಿರುಚುತ್ತಿದೆ. ಚುನಾವಣಾ ಆಯೋಗ ಸೇರಿದಂತೆ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದೆ ಎಂದು ಆರೋಪಿಸಿದರು.

ಚುನಾವಣಾ ಆಯೋಗ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಚುನಾವಣಾ ಆಯೋಗದ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದರ ವಿರುದ್ಧ ನಮ್ಮ ಪಕ್ಷದ ನಾಯಕರಾದ ರಾಹುಲ್‌ಗಾಂಧಿ ಅವರು ಧ್ವನಿ ಎತ್ತಿದ್ದಾರೆ. ಇದು ಎಲ್ಲ ಕಾಂಗ್ರೆಸ್ಸಿಗರ ಧ್ವನಿಯಾಗಿದೆ ಎಂದರು.

ಕೇಂದ್ರ ಸರ್ಕಾರ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದರಿಂದ ದೇಶದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂಬುದನ್ನು ಸಂಕೇತಿಸಿದೆ. ಕೇಂದ್ರದ ಈ ಚುನಾವಣಾ ಅಕ್ರಮಗಳ ವಿರುದ್ಧ ಕಾಂಗ್ರೆಸ್ ದೇಶಾದ್ಯಂತ ಹೋರಾಟ ನಡೆಸಲಿದೆ ಎಂದು ಅವರು ಹೇಳಿದರು.

ಬಿಜೆಪಿಯ ಚುನಾವಣಾ ಅಕ್ರಮಗಳನ್ನು ಜಗಜ್ಜಾಹೀರು ಮಾಡಲು ಕಾಂಗ್ರೆಸ್ ಅಭಿಯಾನ ನಡೆಸುತ್ತದೆ. ಚುನಾವಣಾ ಪ್ರಕ್ರಿಯೆ ಸಮಗ್ರತೆಯನ್ನು ರಕ್ಷಿಸಲು ಈ ಅಭಿಯಾನ ನಡೆಸುತ್ತೇವೆ ಎಂದು ಹೇಳಿದರು.

ಚುನಾವಣಾ ಆಯೋಗ ಒಂದು ಸ್ವಾಯತ್ತ ಸಂಸ್ಥೆಯಾಗಿದೆ. ಅದು ಸ್ವತಂತ್ರವಾಗಿ ನ್ಯಾಯಯುತವಾಗಿ ಕಾರ್ಯನಿರ್ವಹಿಸಬೇಕು. ಆದರೆ ಚುನಾವಣಾ ಆಯೋಗ ಕೇಂದ್ರ ಸರ್ಕಾರದ ನಿರ್ದೇಶನದಂತೆ ಕೆಲಸ ಮಾಡುತ್ತಿದೆ ಎಂದು ದೂರಿದರು.

ಚುನಾವಣಾ ಅಕ್ರಮಗಳು ಮಹಾರಾಷ್ಟ್ರ, ಹರಿಯಾಣ ಮತ್ತು ಕರ್ನಾಟಕದಲ್ಲಿ ನಡೆದಿವೆ ಎಂದು ರಾಹುಲ್‌ಗಾಂಧಿ ಅವರು ಸತ್ಯ ಹೇಳಿದ್ದಾರೆ. ಬಿಹಾರದ ವಿಧಾನಸಭಾ ಚುನಾವಣೆಯಲ್ಲೂ ಬಿಜೆಪಿ ಇದೇ ರೀತಿಯ ಅಕ್ರಮ ಮಾಡಲು ಯೋಜನೆ ರೂಪಿಸಿದೆ ಎಂದು ಅವರು ದೂರಿದರು.

ಬಿಜೆಪಿ ಕುತಂತ್ರದ ವಿರುದ್ಧ ನಾವು ಹೋರಾಟ ನಡೆಸುತ್ತೇವೆ ಎಂದು ಸಂದರ್ಶನದಲ್ಲಿ ಪುನರುಚ್ಚರಿಸಿದ್ದಾರೆ.

ಜಾತಿ ಗಣತಿ ಸಮರ್ಥನೆ

ರಾಷ್ಟ್ರ ವ್ಯಾಪಿ ಜಾತಿ ಗಣತಿ ನಡೆಸುವ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ ಅವರು, ಪ್ರತಿಯೊಂದು ರಾಜ್ಯವೂ ಜಾತಿಗಣತಿ ನಡೆಸಬೇಕು. ಇದರಿಂದ ಎಲ್ಲ ಸಮುದಾಯದವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಗತಿಗಳು ಗೊತಾಗುತ್ತದೆ. ಹಾಗೆಯೇ ಅಸಮಾನತೆಯನ್ನು ಸರಿಪಡಿಸಲು ಈ ಸಮೀಕ್ಷೆ ನೆರವಾಗುತ್ತದೆ ಎಂದು ಅವರು ಹೇಳಿದರು.

ಮುಡಾ ಹಗರಣದ ಬಗ್ಗೆಯೂ ಮಾತನಾಡಿರುವ ಅವರು, ಈ ಹಗರಣದ ಮೂಲಕ ನನ್ನ ಮತ್ತು ನನ್ನ ಕುಟುಂಬಕ್ಕೆ ಅನಗತ್ಯ ಕಿರುಕುಳ ನೀಡಿದ್ದಾರೆ ಎಂದು ಹೇಳಿದರು.

# ಜೂಜಾಟ: 6 ಜನರ ಬಂಧನ

**ಕಲಬುರಗಿ,ಜು.26–**ನಗರದ ಆಳಂದ ಚೆಕ್‌ಪೋಸ್ಟ್ ಹತ್ತಿರವಿರುವ ಶಿವಲಿಂಗ ನಗರ ಕಾಲೋನಿಯ ಗಾರ್ಡನಲ್ಲಿರುವ ಅಂಗನವಾಡಿ ಹತ್ತಿರದ ಖುಲ್ಲಾ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ದಿಲೀಪಕುಮಾರ ಬಿ.ಸಾಗರ, ಸಿಬ್ಬಂದಿಗಳಾದ ಅಶೋಕ, ರಾಜಕುಮಾರ, ನಾಗರಾಜ, ಸುನೀಲಕುಮಾರ ಅವರು ದಾಳಿ ನಡೆಸಿ 6 ಜನರನ್ನು ಬಂಧಿಸಿದ್ದಾರೆ.

ಯುವ ಮಾರ್ಗ

ರವಿವಾರ : 27–07–2025

## ಡಾ. ಶರಣಬಸವಪ್ಪ ಅಪ್ಪಾಜಿ ಅವರ ಆರೋಗ್ಯ ಸ್ಥಿತಿ ಸ್ಥಿರ



**ಕಲಬುರಗಿ, ಜು.26–** ಶುಕ್ರವಾರ ರಾತ್ರಿ ಉಸಿರಾಟದ ಸೋಂಕಿನ ದೂರುಗಳೊಂದಿಗೆ ಖಾಸಗಿ ಆಸ್ಪತ್ರೆಗೆ ದಾಖಲಾಗಿರುವ ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಮತ್ತು ಶೀಘ್ರವಾಗಿ ಸಾಮಾನ್ಯ ಸ್ಥಿತಿಗೆ ಚೇತರಿಸಿಕೊಳ್ಳುತ್ತಿದೆ.

ಡಾ. ಅಪ್ಪಾಜಿ ಅವರನ್ನು ನೋಡಿಕೊಳ್ಳುತ್ತಿರುವ ವೈದ್ಯರ ತಂಡವು ಅವರ ಒಟ್ಟಾರೆ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಮತ್ತು ಉಸಿರಾಟದ ಸೋಂಕು ನಿಯಂತ್ರಣದಲ್ಲಿದೆ ಎಂದು ಹೇಳಿದೆ. ಆಸ್ಪತ್ರೆಯಲ್ಲಿ ಡಾ. ಅಪ್ಪಾಜಿ ಅವರೊಂದಿಗಿರುವ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಅವರು ಪೂಜ್ಯ ಅಪ್ಪಾಜಿ ಅವರ ಆರೋಗ್ಯ ಸ್ಥಿತಿ ಸಾಮಾನ್ಯ ಸ್ಥಿತಿಗೆ ಸುಧಾರಿಸುತ್ತಿದೆ ಎಂದು ತಿಳಿಸಿದ್ದಾರೆ.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರಪರ್ಸನ್ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ಅವರು, ಪೂಜ್ಯ ಡಾ. ಅಪ್ಪಾಜಿ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿರುವುದರಿಂದ ಶರಣಬಸವೇಶ್ವರ ಸಂಸ್ಥಾನದ ಭಕ್ತರು ಭಯಭೀತರಾಗಬಾರದು ಮತ್ತು ಡಾ. ಅಪ್ಪಾಜಿ ಅವರ ಆರೋಗ್ಯ ಸ್ಥಿತಿಯ ಬಗ್ಗೆ ಹರಡಿರುವ ವದಂತಿಗಳಿಗೆ ಕಿವಿಗೊಡಬಾರದು ಎಂದು ಮನವಿ ಮಾಡಿದ್ದಾರೆ.

## ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ 220 ಸಸಿ ನೆಟ್ಟ ಅರಣ್ಯ ಇಲಾಖೆ



**ಕಲಬುರಗಿ,ಜು.26–**ನಗರದಲ್ಲಿ ನೂತನವಾಗಿ ಆರಂಭಗೊಂಡ 100 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವಿಶಾಲವಾದ ಆವರಣದಲ್ಲಿ 220 ಸಸಿಗಳನ್ನು ನೆಡುವುದು ಉತ್ತಮವಾದ ಆಮ್ಲಜನಕ ಇಂಗಾಲಡೈಯಾಕಸೈಡ್‌ನಿಂದ ಒಳ್ಳೆಯ ಗಾಳಿ, ಗಿಡ–ಮರ, ಪಕ್ಷಿ ಸಂಕೂಲ ಹೆಚ್ಚುತದೆ. ಒಳ್ಳೆಯ ವಾತಾವರಣ ಸೃಷ್ಟಿಯಾಗಲಿದೆ. ಇದಕ್ಕೆ ಕಾರಣಿಕರ್ತರದ ಈ ಆಸ್ಪತ್ರೆಯ ಎಲ್ಲಾ ಅಧಿಕಾರಿಗಳು, ಅರಣ್ಯ ಇಲಾಖೆ ಹಾಗೂ ಸಿಬ್ಬಂದಿಗಳಿಗೂ ಶುಭ ಕೋರಿ ಈ ಆಸ್ಪತ್ರೆಯ ಆವರಣದಲ್ಲಿ ಇಂದು ನೆಡಲಾದ ಪ್ರತಿಯೊಂದು ಮರಗಳನ್ನು, ಎಲ್ಲಾ ಸಿಬ್ಬಂದಿಗಳು ಕಾಳಜಿಯಿಂದ ಜೋಪಾನ ಮಾಡಿ ಬೆಳೆಸಿ, ಈ ಆವರಣವು ಹಚ್ಚು  ಹಸಿರಿನಿಂದ ಕಂಗೊಳಿಸುವಂತೆ ಮಾಡಲು, ಆಸ್ಪತ್ರೆಯ ರೋಗಿಗಳಿಗೆ ಸಿಬ್ಬಂದಿಗಳಿಗೆ ಶುದ್ಧ ಗಾಳಿ ದೊರೆಯುವಂತೆ, ಮರಗಳನ್ನು ಬೆಳೆಸಲು ವಿಭಾಗೀಯ ಸಹ ನಿರ್ದೇಶಕರಾದ ಡಾ.ಶಂಕ್ರಪ್ಪ ಮೈಲಾರಿ ಕರೆ ನೀಡಿದರು.

ನಗರ ಹೊರವಲಯದ ದುಬೈ ಕಾಲೋನಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 100 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವಿಶಾಲವಾದ ಆವರಣದಲ್ಲಿ 220 ಮರಗಳನ್ನು ಅರಣ್ಯ ಇಲಾಖೆಯ ವತಿಯಿಂದ, ನೆಡುವ ಕಾರ್ಯಕ್ರಮ ಸಂದರ್ಭದಲ್ಲಿ, ಉಪ ಅರಣ್ಯ ವಲಯ ಅಧಿಕಾರಿ ರಮೇಶ್ ಹಳಕೇರಿ, ಇವರು ತಮ್ಮ ಸಿಬ್ಬಂದಿಗಳ ನೆರವಿನೊಂದಿಗೆ ಆವರಣದಲ್ಲಿ ನೆರವೇರಿಸಲಾಯಿತು.

ಪ್ರಮುಖರಾದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಶರಣಬಸಪ್ಪ ಕ್ಯಾತನಾಳ್ ಮತ್ತು ಜಿಲ್ಲಾ ಶಸ್ತ್ರಜ್ಞರು ಹಾಗೂ ಅಧೀಕ್ಷಕರಾದ ಡಾ.ರೂಖಿಯಾ ಅಸ್ನಾರಬಾ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ.ರಾಕೇಶ್ ಕಾಂಬಳೆ, ಕಲಬುರಗಿ ತಾಲೂಕಾ ಆರೋಗ್ಯ ಅಧಿಕಾರಿಗಳಾದ ಡಾ.ಮಾರುತಿ ಕಾಂಬಳೆ, ಎಂಸಿಹೆಚ್ ಆಸ್ಪತ್ರೆಯ ಡಾ.ಸಂಧ್ಯಾ ರಾಣಿ ಉಪಸ್ಥಿತರಿದ್ದರು.

ಮತ್ತು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಕಚೇರಿಯ ಸಹಾಯಕ ಆಡಳಿತಾಧಿಕಾರಿ ಪಿ.ಪಿ.ನಾಯಕ್, ಜಿಮ್ಸ್ ಆಸ್ಪತ್ರೆಯ ಸಹಾಯಕ ಆಡಳಿತಾಧಿಕಾರಿ ವೀರಣ್ಣ ತಳವಾರ ಇತರೆ ಅನೇಕ ಸಿಬ್ಬಂದಿಗಳು ಹಾಜರಿದ್ದರು.

ಕೊನೆಯದಾಗಿ ಡೆಪ್ಯೂಟಿ ಆರ್.ಎಫ್.ಓ ಅಧಿಕಾರಿ ರಮೇಶ ಹಾಲಕೇರಿ ಅವರು, ತಮ್ಮ ಇಲಾಖೆಯಿಂದ ಇಂದು ನೆಡುತ್ತಿರುವ ಮರಗಳನ್ನು ತಮ್ಮ ಇಲಾಖೆಯ ನೆರವಿನಿಂದ 2 ವರ್ಷಗಳವರೆಗೆ ನೋಡಿಕೊಳ್ಳುವುದಾಗಿ ತಿಳಿಸುತ್ತಾ, ಜಾಗತಿಕ ತಾಪಮಾನ ಕಡಿಮೆ ಮಾಡಲು, ನೈಸರ್ಗಿಕ ವಿಕೋಪಗಳನ್ನು ತಡೆಯಲು, ಎಲ್ಲರೂ ಗಿಡ ಮರಗಳನ್ನು ಬೆಳೆಸುವಲ್ಲಿ ವಿಶೇಷ ಕಾಳಜಿವಹಿಸುತೆವೆ ಎಂದು ಹೇಳಿದರು.

ಮೊದಲಿಗೆ ಪ್ರಾಸ್ತಾವಿಕವಾಗಿ ಮಾತನಾಡಿದ ವೀರಣ್ಣ ತಳವಾರ, ನಸಿರ್‌ಂಗ್ ಆಫೀಸರ್ ಮೌಲಾಸಾಬ್ ಮತ್ತು ಮೋಹಿನಿ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಗೌರವಿಸಿದರು. ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು, ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಭೂಸ್ವಾದೀನ ಪರಿಹಾರ ವಿಳಂಬ, ನೀರಾವರಿ ಕಚೇರಿ ಸಾಮಗ್ರಿ ಜಪ್ತಿ

**ಯುವ ಮಾರ್ಗ ಸುದ್ದಿ**



**ಸಿರವಾರ, ಜು.26–** ತಾಲೂಕಿನ ಹಿರೇದಿನ್ನಿ ಗ್ರಾಮದ ರೈತ ಕರಿಯಪ್ಪ ಅವರ ಕುಟುಂಬಕ್ಕೆ 16.30ಲಕ್ಷ ರೂ. ಭೂಸ್ವಾಧೀನ ಪರಿಹಾರ ನೀಡಲು ನೀರಾವರಿ ಇಲಾಖೆಯ ಅಧಿಕಾರಿಗಳು ವಿಳಂಬ ಮಾಡಿದ ಹಿನ್ನೆಲೆಯಲ್ಲಿ, ನ್ಯಾಯಾಲಯದ ಆದೇಶದಂತೆ ಸಿರವಾರ ಪಟ್ಟಣದ ನೀರಾವರಿ ಇಲಾಖೆ ಕಾರ್ಯ ಪಾಲಕ ಅಭಿಯಂತರರ ಕಚೇರಿಯ ವಿಭಾಗ 4ರ ಪೀಠೋಪಕರಣಗಳನ್ನು ಬುಧವಾರ ಜಪ್ತಿ ಮಾಡಲಾಯಿತು.

1976ರಲ್ಲಿ ಸಿರವಾರ ತಾಲೂಕಿನ ಹಿರೇಬಾದರದಿನ್ನಿ ಗ್ರಾಮದ ಸರ್ವೆ ನಂ.113 ರಲ್ಲಿನ 15 ಗುಂಟೆ ಜಮೀನನ್ನು ಬಾಗಲವಾಡ ಗ್ರಾಮದಿಂದ ಗೊಲ್ಲದಿನ್ನಿ ಗ್ರಾಮದವರೆಗೆ ಆಯಾಕಟ್ಟು ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನ ಮಾಡಿಕೊಳ್ಳಲಾಗಿತ್ತು.

ಜಮೀನು ಕಳೆದುಕೊಂಡ ಸಾಕಷ್ಟು ಜನ ಪಲಾನು ಭವಿಗಳಿಗೆ ಪರಿಹಾರ ನೀಡಿದೆ. ಅಂದಿನ ದಿನಗಳಿಂದ ತಾಂತ್ರಿಕ ತೊಂದರೆ ಉಂಟಾಗಿ ರೈತ ಕರಿ ಯಪ್ಪ ಅವರ ಕುಟುಂಬಸ್ಥರು ಪರಿಹಾರದಿಂದ ವಂಚಿತರಾಗಿದ್ದರು.

ಆದರೆ ಇದುವರೆಗೂಕೂಡ ಕರಿಯಪ್ಪ ಅವರ ಕುಟುಂಬಸ್ಥರಿಗೆ ಪರಿಹಾರ ಸಿಕ್ಕಿಲ್ಲ. ಆದ್ದರಿಂದ ನ್ಯಾಯಲ ಯವು ನೀರಾವರಿ ಇಲಾಖೆಯ ಚರಾಸಿಗಳನ್ನು ಜಪ್ತಿ ಮಾಡುವಂತೆ

3–4 ಬಾರಿ ಆದೇಶಿಸಿದೆ. ಆದರೂ ಸಹ ಇಲಾಖೆಯ ಅಧಿಕಾರಿಗಳು ರೈತನಿಗೆ ಪರಿಹಾರ ಕೊಡಿಸುವಲ್ಲಿ ನಿರ್ಲಕ್ಷ್ಯ ತೋರಿದ್ದಾರೆ.ಜೂನ್ 23 ರಂದು ಮಾನ್ವಿಯ ಹಿರಿಯಶ್ರೇಣಿ ಸಿವಿಲ್ ನ್ಯಾಯಾಲಯವು ನೀರಾವರಿ ಇಲಾಖೆ ಕಚೇರಿಯ ಚರಾಸ್ತಿಗಳನ್ನು ಜಪ್ತಿ ಮಾಡಲು ಆದೇಶ ನೀಡಿದ ಮೇರೆಗೆ ನ್ಯಾಯಾಂಗ ಇಲಾಖೆಯ ಸಿಬ್ಬಂದಿ ಕಚೇರಿಯ ಕಂಪ್ಯೂಟರ್, ಪೀಠೋಪಕರಣಗಳನ್ನು ವಶಕ್ಕೆ ಪಡೆದರು.

ಆದೇಶದ ನ್ಯಾಯಾಲಯದ ಪ್ರಕಾರ ಪರಿಹಾರ ಮೊತ್ತ ಒಟ್ಟು 16.30.323 ರೂಪಾಯಿ ಹಣಭೂಮಿ ಕಳೆದುಕೊಂಡ ರೈತ ಕರಿಯಪ್ಪ ಅವರ ಕುಟುಂಬಕ್ಕೆ ಸಿಗದ ಕಾರಣ, ಜಪ್ತಿ ಪ್ರಕ್ರಿಯೆ ಕೈಗೊಂಡಿದ್ದೇವೆ ಎಂದು ವಕೀಲರಾದ ಶಿವರಾಜ ಪಾಟೀಲ್ ತಿಳಿಸಿದರು. ಕಚೇರಿಗೆ ಎಂದಿನಂತೆ ಬಂದಿದ್ದ ಇಲಾಖೆ ಸಿಬ್ಬಂದಿಯು ಜಪ್ತಿ ವಿಷಯ ಕೇಳಿದ ತಕ್ಷಣ ಕಂಗಾಲಾಗಿ, ಕಚೇ–ರಿಯ ಹೊರಗಡೆ ಕುಳಿತರೆ. ಇನ್ನೂ ಕೆಲ ಅಧಿಕಾರಿಗಳು ತಮ್ಮ ಮನೆಗೆ ತೆರಳಲು ಸಿದ್ಧ ವಾಗಿದ್ದರು. ಈ ಸಂದರ್ಭದಲ್ಲಿ ನ್ಯಾಯಾಲಯದ ಸಿಬ್ಬಂದಿಗಳಾದ ನಂದಪ್ಪ,ಮೊಹಮ್ಮದ್ ಜಾನ್, ಕರಿಯಪ್ಪ ಸೇರಿ ಅನೇಕರು ಇದ್ದರು.

## 15 ದಿನಕ್ಕೊಮ್ಮೆ ಸ್ವಚ್ಚಗೊಳಿಸಿ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಿ : ಇ ಓ ಬಸವರಾಜ ಹಟ್ಟಿ

**ಯುವ ಮಾರ್ಗ ಸುದ್ದಿ**



**ದೇವದುರ್ಗ,ಜು.26–** ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಶುಕ್ರವಾರ ಎಲ್ಲಾ ಗ್ರಾಮ ಪಂಚಾಯತಿಗಳ ಪರಿಶೀಲನಾ ಸಭೆಯನ್ನು ಕಾರ್ಯನಿರ್ವಾಹಕ ಪ್ರಗತಿ ತಾ.ಪಂ ಬಸವರಾಜ ಹಟ್ಟಿ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಯಿತು. ಬಳಿಕ ಮಾತನಾಡಿದ ಅವರು ತಾಲೂಕಿನ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಪಂಚಾಯತಿಗಳಲ್ಲಿ ಪ್ರತಿ ತಿಂಗಳು ತಪ್ಪದೆ ಸಭೆಯನ್ನು ಮಾಡಬೇಕು.

ಜೊತೆಗೆ ತಮ್ಮ ಪಂಚಾಯತಿ ವ್ಯಾಪ್ತಿಯ ಪ್ರತಿ ಗ್ರಾಮದಲ್ಲಿರುವ O H T ಟ್ಯಾಂಕ್ ಹಾಗೂ ಇತರೆ ನೀರಿನ ಟ್ಯಾಂಕ್ ಗಳನ್ನು 15 ದಿನಗಳಿಗೊಮ್ಮೆ ಸ್ವಚ್ಚಗೊಳಿಸಿ. ಜನರಿಗೆ ಶುದ್ದ ಕುಡಿಯುವ ನೀರನ್ನು ಕೊಡಬೇಕು ಎಂದು ಸೂಚಿಸಿದರು.

ಈ ಸಭೆಯಲ್ಲಿ ಮಹೇಶ್ವರಿ ಸಹಾಯಕ ನಿರ್ದೇಶಕರು ಪಂಚಾಯತ್ ರಾಜ್ ರವರು ಗ್ರಾಮ ಪಂಚಾಯಿತಿ ಕಸದ ವಾಹನಗಳಿಗೆ ಕಡ್ಡಾಯವಾಗಿ ವಿಮೆಯನ್ನು ಮಾಡಿಸಬೇಕೆಂದು ಹಾಗೂ ವಾಹನದ ಚಾಲಕರಿಗೂ ಮತ್ತು ಸ್ವಚ್ಛತಾ ಪ್ರತಿ ತಿಂಗಳ 5ನೇ ತಾರೀಕದೊಳಗೆ ಅವರಿಗೆ ಗೌರವ ಧನವನ್ನು ನೀಡಬೇಕು ಘನ ತ್ಯಾಜ್ಯ ಘಟಕದಲ್ಲಿ ಹಸಿ ಕಸ ಮತ್ತು ಒಣ ಕಸವನ್ನು ವಿಂಗಡಣೆ ಮಾಡಲು ಸೂಚಿಸಿದರು. ಅಣ್ಣರಾವ್ ಸಹಾಯಕ ನಿರ್ದೇಶಕರು ಪ್ರತಿ ತಿಂಗಳು ಕರ ವಸೂಲುಗಾರರಿಗೆ ನಿಗದಿ ಪಡಿಸಿದ ಗುರಿಯಂತೆ ಕರ ವಸೂಲಿ ಮಾಡುವಂತೆ ಸೂಚಿಸಿದರು. 33 ಗ್ರಾಮ ಪಂಚಾಯಿತಿಗಳಲ್ಲಿ ಇ ಹಾಜರಾತಿ ಕಡ್ಡಾಯವಾಗಿ ಮಾಡಬೇಕು ಹಾಗೂ ಕೂಸಿನ ಮನೆಯಗಳು ಪ್ರಾರಂಭ ಮಾಡಬೇಕು. ಮಕ್ಕಳಿಗೆ ವೇಳಪಟ್ಟಿಯಂತೆ ಉಪಹಾರವನ್ನು ನೀಡಲು ತಿಳಿಸಿದರು ಆರ್ಕೈಕೆದಾರರ ಎನ್ ಆರ್ ಎಂ ಗಳನ್ನು ಕಡ್ಡಾಯವಾಗಿ ತೆಗೆಯಲು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ವಿಷ ಆಹಾರ ದುರಂತ :ಸಚಿವ ಎನ್.ಎಸ್. ಬೋಸರಾಜು ಅವರಿಂದ ಸಂತ್ರಸ್ತರ ಭೇಟಿ

**ಯುವ ಮಾರ್ಗ ಸುದ್ದಿ**



**ರಾಯಚೂರು,ಜು.26–** ಜಿಲ್ಲೆಯ ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿರವಾರ ತಾಲೂಕಿನ ಕಡ್ಡೋಣಿ ತಿಮ್ಮಾಪುರ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ ವಿಷಾಹಾರ ಸೇವನೆಯ ದುರ್ಘಟನೆಯಲ್ಲಿ ಅಸ್ವಸ್ಥಗೊಂಡು ರಿಮ್ಸ್ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂತ್ರಸ್ತರನ್ನು ಇಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರಾದ ಎನ್.ಎಸ್. ಬೋಸರಾಜು ಅವರು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಸಚಿವರು ಸಂತ್ರಸ್ತರು ಚಿಕಿತ್ಸೆಗೆ ಸ್ಪಂದಿಸುತ್ತಿರುವ ರೀತಿ ಹಾಗೂ ಆರೋಗ್ಯದಲ್ಲಿ ಆಗುತ್ತಿರುವ ಚೇತರಿಕೆಯ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು. ಹೆಚ್ಚಿನ ಚಿಕಿತ್ಸೆಯ ಅಗತ್ಯಬಿದ್ದರೆ, ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ವೈದ್ಯರಿಗೆ ಸೂಚಿಸಿದರು.

ಇದೇ ಸಂದರ್ಭದಲ್ಲಿ, ವಿಷಾಹಾರ ಸೇವನೆಯ ದುರ್ಘಟನೆಯಿಂದ ಮೃತರಾದ ರಮೇಶ ನಾಯಕರ ಕುಟುಂಬವರ್ಗಕ್ಕೆ ಬೋಸರಾಜು ಅವರು ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಕೆ. ಶಾಂತಪ್ಪ, ಜಿ. ಶಿವಮೂರ್ತಿ, ರುದ್ರಪ್ಪ ಅಂಗಡಿ, ಅಮರೇಗೌಡ ಹಂಚಿನಾಳ, ಜಯವಂತರಾವ್ ಪತಂಗೆ, ಹರಿಬಾಬು ಹಾಗೂ ವೈದ್ಯರು ಉಪಸ್ಥಿತರಿದ್ದರು.

## ತಾಳಿಕೋಟೆಯಲ್ಲಿ ಕಳ್ಳರ ಚಡ್ಡಿ ಗ್ಯಾಂಗ್ ಸಿಸಿ ಕ್ಯಾಮೆರಾದಲ್ಲಿ ಸೆರೆ: ಜನರಲ್ಲಿ ಆತಂಕ

**ವಿಜಯಪುರ, ಜು.26–**ವಿಜಯಪುರ ಜಿಲ್ಲೆಯಲ್ಲಿ ಮತ್ತೆ ಚಡ್ಡಿ ಗ್ಯಾಂಗ್ ಕಾಣಿಸಿಕೊಂಡು ಜನರಲ್ಲಿ ಭಯದ ವಾತಾವರಣ ಮೂಡಿಸಿದೆ.ಈ ಹಿಂದೆ ವಿಜಯಪುರ ಜಿಲ್ಲೆಯಲ್ಲಿ ಚಡ್ಡಿ ಗ್ಯಾಂಗ್ ಜನರ ನಿದ್ರೆಗೆಡಿಸಿ ಭಯದ ವಾತಾವರಣ ಮೂಡಿಸಿತ್ತು. ಕೆಲವು ತಿಂಗಳುಗಳಿಂದ ಚಡ್ಡಿ ಗ್ಯಾಂಗ್ ಉಪಟಳ ಇಲ್ಲವಾಗಿ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಆದರೆ ಈಗ ಮತ್ತೆ ಜಿಲ್ಲೆಯ ತಾಳಿಕೋಟೆ ಪಟ್ಟಣದ ಗಣೇಶನಗರದಲ್ಲಿ ಚಡ್ಡಿ ಗ್ಯಾಂಗ್ ಕದೀಮರು ಬಾಲ ಬಿಚ್ಚಿದ್ದಾರೆ. ಈ ಕದೀಮರ ಚಲನವಲನ ಸಿಸಿ ಕೆಮೆರಾದಲ್ಲಿ ಸೆರೆಯಾಗಿದೆ.ಆರು ಜನರು ಇರುವ ಕಳ್ಳರ ಚಡ್ಡಿ ಗ್ಯಾಂಗ್ ಮುಖಕ್ಕೆ ಮಾಸ್ಕ್, ಬನಿಯನ್ ಹಾಗೂ ಚಡ್ಡಿ ಧರಿಸಿ ಕೈಯಲ್ಲಿ ಮಾರಕಾಸ್ತ್ರ, ದೊಣ್ಣೆ, ಹಿಡಿದು ಕಳ್ಳತನ ಮಾಡುವ ಯತ್ನ ಮಾಡಿರುವುದು ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

## ಗಗನಸಖಿ ತರಬೇತಿ ಪಡೆಯುತ್ತಿದ್ದ ಯುವತಿ ನಾಪತ್ತೆ

**ಕಲಬುರಗಿ,ಜು.26–**ನಗರದ ವಿಜನ್ ಫ್ಲಾಯ್ ಖಾಸಗಿ ತರಬೇತಿ ಕೇಂದ್ರದಲ್ಲಿ ಗಗನಸಖಿ ತರಬೇತಿ ಪಡೆಯುತ್ತಿದ್ದ ಯುವತಿಯೊಬ್ಬಳು ನಾಪತ್ತೆಯಾಗಿದ್ದಾಳೆ.

ರಾಯಚೂರಿನ ಈ ಯುವತಿ ನಗರದಲ್ಲಿ ಪಿಜಿಯಲ್ಲಿ ಇದ್ದು ಗಗನಸಖಿ ತರಬೇತಿ ಪಡೆಯುತ್ತಿದ್ದಳು. ತಾನಿದ್ದ ಪಿಜಿಯಿಂದಲೇ ಕಾಣೆಯಾಗಿದ್ದು, ಜು.24 ರಂದು ಕರೆ ಮಾಡಿ ಶಕ್ತಿ ನಗರದಲ್ಲಿ ಮದುವೆಯಾಗಿರುವುದಾಗಿ ಹೇಳಿ ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾಳೆ ಎಂದು ಯುವತಿಯ ತಾಯಿ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕಾಣೆಯಾದ ಯುವತಿ 5 ಅಡಿ 1 ಇಂಚು ಎತ್ತರವಿದ್ದು, ಬಿಳಿ ಮೈಬಣ್ಣ, ತೆಳ್ಳನೆಯ ಮೈಕಟ್ಟು, ಕೆಂಪು ಗುಂಗುರು ಕೂದಲು ಹೊಂದಿದ್ದಾಳೆ. ಕನ್ನಡ, ಹಿಂದಿ, ತೆಲಗು ಮತ್ತು ಇಂಗ್ಲೀಷ್ ಭಾಷೆ ಮಾತನಾಡುತ್ತಾಳೆ. ಕಾಣೆಯಾದ ಯುವತಿ ಬಗ್ಗೆ ಯಾರಿಗಾದರೂ ಮಾಹಿತಿ ದೊರೆತಲ್ಲಿ ಬ್ರಹ್ಮಪುರ ಪೊಲೀಸ್ ಠಾಣೆಯನ್ನು ಸಂಪರ್ಕಿಸಲು ಕೋರಲಾಗಿದೆ.

## ಒಳ ಮೀಸಲಾತಿ ಜಾರಿ ಮಾಡದಿದ್ದಲ್ಲಿ ಉಗ್ರ ಹೋರಾಟ



**ಬೀದರ್:ಜು.26–** ರಾಜ್ಯ ಸರ್ಕಾರ ಮುಂಗಾರು ಅಧಿವೇಶನ್ನೂ ಮುನ್ನ ಒಳ ಮೀಸಲಾತಿ ಜಾರಿ ಮಾಡದಿದ್ದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಕರ್ನಾಟಕ ರಾಜ್ಯ ಆದಿ ಜಾಂಬವ ಸಂಗಟನೆ ಜಿಲ್ಲಾ ಗೌರವಾಧ್ಯಕ್ಷ ಝೂಪಟರಾಜ ಕಡ್ಯಾಳ ಎಚ್ಚರಿಸಿದರು.

ಶುಕ್ರವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಸಿಸಿ ಮಾತನಾಡಿರುವ ಅವರು, ನ್ಯಾ.ಹೆಚ್.ಎನ್.ನಾಗಮೋಹನ್‌ದಾಸ್‌ರವರ ಸಮೀಕ್ಷಾ ವರದಿ ಜುಲೈ 30ರೊಳಗೆ ಸಲ್ಲಿಕೆಯಾಗಲಿ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಅಧಿವೇಶನದಲ್ಲಿ ಒಳಮೀಸಲಾತಿ ಈಡೇರಿಕೆಗಾಗಿ ತಮ್ಮ ಬದ್ಧತೆ ಪ್ರಕಟಿಸಲಿ. ಎಂದರು.

ಮಳೆಗಾಲ ಅಧಿವೇಶನದಲ್ಲಿ ಒಳಮೀಸಲಾತಿ ಅಂಗೀಕರಿಸಲು ಆಗ್ರಹಿಸಿ ಆಗಸ್ಟ್ 11 ರಿಂದ ಬೆಂಗಳೂರಿನ ಫ್ರಿಡಮ್ ಪಾರ್ಕ್ನಲ್ಲಿ ಅನಿರ್ಧಿಷ್ಟ ಆಹೋರಾತ್ರಿ ಸತ್ಯಾಗ್ರಹ ಆರಂಭಿಸಲಾಗುವುದೆಂದರು.

ಆಗಸ್ಟ್ 1 2024 ರಂದು ಸರ್ವೋಚ್ಚ ನ್ಯಾಯಾಲಯವು ಪರಿಶಿಷ್ಟರ ಬಹು ದಿನಗಳ ಬೇಡಿಕೆಯನ್ನು ರಾಜ್ಯ ಸರ್ಕಾರಗಳು ಆದ್ಯತೆಯ ಮೇರೆಗೆ ಜಾರಿಗೊಳಿಸಬಹುದು ಎಂಬ ಐತಿಹಾಸಿಕ ತೀರ್ಪನ್ನು ನೀಡಿ ಒಂದು ವರ್ಷ ಗತಿಸುತ್ತಿದೆ. ಎರಡೇ ತಿಂಗಳಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳ ಜನಸಂಖ್ಯಾ ಸಮೀಕ್ಷೆ ಪೂರ್ಣಗೊಳಿಸಿ. ತಮ್ಮ ನೈತಿಕ ಜವಾಬ್ದಾರಿ ಪೂರೈಸಿದ್ದರೆ 30 ವರ್ಷಗಳ ಒಳ ಮೀಸಲಾತಿ ಹೋರಾಟವು ಮತ್ತೊಂದು ಸುತ್ತಿನ ಹೋರಾಟವಾಗಿ ಪರಿವರ್ತನೆಯಾಗುವ ಅಗತ್ಯವಿರಲಿಲ್ಲ. ಈಗಲಾದರೂ ಇಂತಹ ನಿರ್ಲಕ್ಷ್ಯ ಧೋರಣೆ ಮುಂದುವರೆಸದೇ, ಆಡಳಿತರೂಢ ಕಾಂಗ್ರೆಸ್ ಸರ್ಕಾರವು ಪ್ರಸಕ್ತ ಅಧಿವೇಶನದಲ್ಲಿ ಒಳಮೀಸಲಾತಿ ಜಾರಿಗೊಳಿಸುವ ಮೂಲಕ ತಮ್ಮ ಬದ್ಧತೆ ಪ್ರಕಟಿಸಬೇಕಾಗಿದೆ. ಏಕೆಂದರೆ, ಜಸ್ಟಿಸ್ ನಾಗಮೋಹನ್ ದಾಸ್‌ರವರ ನೇತೃತ್ವದಲ್ಲಿ ನೇಮಕವಾದ ಏಕಸದಸ್ಯ ಆಯೋಗವು ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಕೈಗೊಂಡು ವೈಜ್ಞಾನಿಕ ಹಾಗೂ ವಸ್ತುನಿಷ್ಠ ವರದಿಯನ್ನು ಜುಲೈ 30ರೊಳಗಡೆ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ಹಾಗಾಗಿ ವರದಿಯನ್ನು ಆದಷ್ಟು ಬೇಗ ಪಡೆದು ಆಗಸ್ಟ್ 11 ರಿಂದ ಆರಂಭವಾಗಲಿರುವ ಒಳಮೀಸಲಾತಿ ಅನುಮೋದನೆಯೊಂದಿಗೆ ಬೇಡಿಕೆಯನ್ನು ಅಧಿವೇಶನದಲ್ಲಿ ಸರ್ವಪಕ್ಷಗಳ ಅಂಗೀಕರಿಸಿದರೆ, ನೇಮಕಾತಿ ಆಗಬೇಕಾದ 30 ಸಾವಿರಕ್ಕೂ ಅಧಿಕ ಹುದ್ದೆಗಳು ವಂಚಿತ ನಿರುದ್ಯೋಗಿ ಯುವಕ, ಯುವತಿಯರು ಪಡೆಯಬಹುದಾಗಿದೆ ಎಂದರು.

ಸಂಘಟನೆ ಜಿಲ್ಲಾಧ್ಯಕ್ಷ ಸಂಜೀವಕುಮಾರ ಬೇಂದ್ರೆ ಮಾತನಾಡಿ, ಕಳೆದ 30 ವರ್ಷಗಳಲ್ಲಿ ಆಯೋಗ ನೇಮಕವಾಗಲು, ನೇಮಕವಾದ ಆಯೋಗಕ್ಕೆ ಅನುದಾನ ನೀಡಲು, ಸರ್ಕಾರಕ್ಕೆ ಒಪ್ಪಿಸಿದ ವರದಿ ಅನುಷ್ಠಾನಗೊಳಿಸಲು 3 ದಶಕಗಳ ವಿಳಂಬ ಮುಂದುವರೆದಿರುವುದರಿಂದ ನೊಂದ ಸಮುದಾಯಗಳು ಯಾವುದೇ ಸರ್ಕಾರಗಳನ್ನು ನಂಬುವ ಸ್ಥಿತಿಯಲ್ಲಿಲ್ಲ. ಈ ಎಲ್ಲಾ ಕಹಿ ಅನುಭವಗಳು ಮುಂದುವರೆಯದಂತೆ ಸರ್ಕಾರವು ಆಗಸ್ಟ್ 11 ರಿಂದ ಆರಂಭವಾಗಲಿರುವ ಮಳೆಗಾಲ ಅಧಿವೇಶನದಲ್ಲಿ ಒಳಮೀಸಲಾತಿ ಜಾರಿಗೊಳಿಸುವ ತೀರ್ಮಾನ ಕೈಗೊಳ್ಳುವ ಮೂಲಕ ನುಡಿದಂತೆ ನಡೆಯಲು ಆಗ್ರಹಿಸಿ ದಿನಾಂಕ: 11–08–2025 ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್ನಲ್ಲಿ ಅನಿರ್ಧಿಷ್ಟ ಅಹೋರಾತ್ರಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಎಲ್ಲಾ' ಸಂಘ ಸಂಸ್ಥೆಗಳ ಮುಖಂಡರುಗಳು ಹಾಗೂ ರಾಜಕೀಯ ಪಕ್ಷಗಳ ಮುಖಂಡರು ಪಕ್ಷಾತೀತವಾಗಿ ಈ ಹೋರಾಟದಲ್ಲಿ ಭಾಗವಹಿಸಬೇಕೆಂದು ಬೇಂದ್ರೆ ವಿನಂತಿಸಿದರು.

ಸಂಘಟನೆಯ ಕಲ್ಯಾಣ ಕರ್ನಾಟಕ ವಿಭಾಗೀಯ ಯುವ ಘಟಕದ ಅಧ್ಯಕ್ಷ ಮಲ್ಲಿಕ ಮಡಿಗೆ, ಜಿಲ್ಲಾ ಕಾರ್ಯಾಧ್ಯಕ್ಷ ಯುವರಾಜ ಭೇಂಡೆ, ಜಿಲ್ಲಾ ಉಪಾಧ್ಯಕ್ಷ ಸಿ.ಎಮ್.ದಾಸ್, ಜಿಲ್ಲಾ ಯುವ ಅಧ್ಯಕ್ಷ ಜೀವನ ರಿಕ್ಕೆ, ಇತರೆ ಪದಾಧಿಕಾರಿಗಳಾದ ಮೈಕಲ್ ಕೊಡ್ಡಿಕರ್, ರೋಹನ್, ಸುಮಂತ ಮೇತ್ರೆ, ಹಣಮಂತ ಸೂರ್ಯವಂಶಿ, ಅಶೋಕ ದರ್ಬಾರೆ, ದಯಾನಂದ ಮೇತ್ರೆ, ಬಾಬುರಾವ ಮಣಗೆರೆ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A  Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka  Editor: ANILKUMAR H